ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 11th April 1973/Chaitra 21, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕಡೆಗೆ ರೂಲ್ 312ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೇನು...

ಅಧ್ಯಕ್ಷರು.—ಈ ಹಿಂದೆ ಈ ರೂಲ್ 312ರ ಪ್ರಕಾರ ಬರತಕ್ಕ ನೋಟೀಸುಗಳ ಬಗ್ಗೆ ಅವುಗಳನ್ನು ಹೇಗೆ ವ್ಯವಹರಿಸಬೇಕೆಂಬ ಬಗ್ಗೆ ಒಂದು ರೂಲಿಂಗನ್ನು ಕೊಟ್ಟಿರುತ್ತೆ. ಆ ದಿವಸ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲವೆಂದು ಕಾಣುತ್ತದೆ. ತಾವು ದಯಮಾಡಿ ಆ ರೂಲಿಂಗನ್ನು ನೋಡಿದರೆ ತಮಗೆ ವಿಚಾರವೆಲ್ಲಾ ಗೊತ್ತಾಗುತ್ತದೆ.

BUDGET ESTIMATES FOR 1973-74

DEMANDS FOR GRANTS

DEMAND NO. 18—MEDICAL, PUBLIC HEALTH AND FAMILY PLANNING

(Debate continued)

† **Sri H. SIDDAVEERAPPA** (Minister for Health).—Madam Speaker, I have heard with very great attention the several speehes made by the hon. members regarding the Demands of my portfolio. I am greatful to the first speaker, hon. member Sri Kagodu Thimmappa for the several suggestions he made for the improvement of the Department. He stated that in the matter of repairs to the machinery and other things there is so much delay and in some places even for months improvements have not been made. He further stated that doctors are willing to stay only in the towns and cities and that they are not willing to work in rural areas. One thing he very very firmly and at the same time very strongly mentioned was about the private Medical Colleges in the State, and about the evils of capitation fees and how, according to him they have been working against the interests of the society in general. I could

---

† Indicates that the remarks or speeches have not been revised by the member concerned.

(SRI H. SIDDAVEERAPPA)

tell the hon. member that so far as the private Medical Colleges are concerned Government of India also are very much exercised and at sometimes they seem to feel that if necessary all these private Medical Colleges will have to be taken oves by the Government. We could not forget one fact so far as these private Medical Colleges are concerned. They were started strictly according to the provisions allowed and permitted under the Constitution. Right of private enterprise is allowed and they developed of eourse in their own way. Subsequently when it was found that they were not working in the interests of the State and in the interest of education in the State, Government, after this Ministry came into being, have tried to have certain controls. The controls that the Government have imposed on them I have already stated on one or two occasions on the floor of this House. It is enough to say that no longer the private colleges have been allowed to function without any let or hindrance; as it is the Government have taken some steps so that they could work under the limited permission give to them. So far as these private Medical Colleges are concerned, Government have passed an order. This is the position : regarding admissions 25 per cent of the seats are filled by the Committee constituted by the Government, and of course, these 25 per cent seats go only to Mysoreans and no capitation fee is allowed so far as this 25 per cent of the seats are concerned. Another 50 percent of the seats will have to be given only to Mysoreans and Mysore students and that under no circumstanees capitation fee should be more than Rs. 5,000. That means out of 100 boys they admit, 75 seats should go to Mysore students and only 25 seats are left to them to be filled according to the decision of their respective Governing Councils. Last year, I had called one or two meetings. I have imposed a condition on them saying that there shall be a Governing Council of 7 members, out of which 4 will be the nominees of the Government. In other words, the Hon'ble House will see that Government body as an effective administrative controlling agency consists of a majority of Government officers ; indirectly the management comes under the administrative control, though not fully, at least in matters of policy. The nominees of the Government are Government servants. This is an order I have passed and this order has been imposed on them.

The Hon. Leader of the Opposition—Sri H. D. Deve Gowda yesterday said that even if you begin to touch the Manipal Medical College, you will find your Waterloo. I do not know how I can meet my Waterloo. But this much is certein that I have allowed them to go and function within the orbit of the Government Order. Some Hon. Member may as well ask me ; why are you leaving 25 per cent of seats for them ? We should not forget that Government are not giving them any grants except giving clinical facilities. The clinical facilities have been

given because they cannot run the hospitals. An institution like Manipal Medical College, they have been trying to build up a Hospital complex of their own and they have already built one. But with regard to other private Medical Colleges, they are not in a position to have their own hospital; clinical facilities are absolutely essential in order to run the Medical College. The Hon'ble House will please see that this Government have not allowed any private Medical College to come up inspite of their applications. They have been saying that under the Constitution they are entitled to develop and build their own institutions. We cannot work outside the orbit of the Constitution. Therefore the Hon'ble House will please see, in the matter of policy, there is no difference-not much of a difference between the Government stand and the stand expressed by some hon. members here. But unfortunately...

Sri B. B. SAYANAK.—You have stated that you have allowed them to charge Rs. 5,000 as capitation fee. No doubt, they charge only Rs. 5,000 and pass on a receipt but they will collect Rs. 50,000 for which they do not issue any receipt. Those who have paid Rs. 50,000 are known to me. In Belgaum College they have charged Rs. 50,000.

ಶ್ರೀ ಕೋಣಂದೂರು ಲಿಂಗಪ್ಪ.—ಅಡ್ಮಿಷನ್ ಟೈಂನಲ್ಲಿ ಎರಡೂವರೆ ಮೂರು ಸಾವಿರ ರೂಪಾಯಿ ಫೀಜನ್ನು ತೆಗೆದುಕೊಳ್ಳುವುದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಚ್. ಸಿದ್ಧವೀರಪ್ಪ.—ಫೀಜನ್ನು ತೆಗೆದುಕೊಳ್ಳುವುದು, ಅದರಲ್ಲಿ ಅನುಮಾನವಿಲ್ಲ.

You may call it either donation or by another name. They can take only Rs. 5,000 as capitation and this has been accepted by the Government. They can take fee from the students. What they have been saying is that Government have not been giving them any financial aid. Now we have decided to call for their budgets. Their budgets will be scrutinised. Everything will be within the purview of the Government because we have got our own nominees on their Governing Councils.

Government called a meeting on 19-7-1972 and they took certain decisions and they have been asked to adhere to the decisions which I have already said *viz.*, the 4 representatives of Government will be on their govorning councils ; 50 per cent of the total nnmber of seats will be reserved for Mysore students with a capitation fee not exceeding Rs. 5,000, 25 per cent of the total number of seats will be reserved and will be filled up by a Selection Committee appointed by the State Government. With regard to other 25 percent, as I have already said, I have left it to them, because as we all know the Medical College recurring expenditure is not less than Rs. 25 lakhs per annum and that somehow they must mete out this amount. It is one thing to say that all the Medical Colleges should be nationalised. That is a matter of policy. So far as Private Medical Colleges are concerned, I can tell you there is no difference between you and me in the matter of approach. If at all I have not been able to bring another 25 percent under the Control of the Government, it is because the Government are

(ಶ್ರೀ ಎಚ್, ಸಿದ್ದವೀರಪ್ಪ)

not in a position to spend any money for their up keepor for their maintenance. As pointed out by an hon. member that they have taken Rs. 50,000 against which they have given receipt for Rs. 5,000. If one or two cases are proved, it is enough for me to ask the University authorities to take suitable action for disaffiliating them from the University to which they have deen attabced. They have been saying and as a matter of fact they say, even in Manipal, they attract students from other places. When 25 per cent of the seats are left to them and there is nothing wrong in admission of students from other countries. Really I do not know how I can control them. But if you want to nationalise them, if this House wants to nationalise those institutions, bring in a resolution and if the House arms me and if I am provided with the necessary funds, I will be the first man to do it. If at all I have not been able to lay my hands on them, it is because of paucity of funds. Now the simple proposition is this ; will you allow them to continue as they are ; or you must ask them to close ? If you want to nationalise them, you will have to pay compensation and other things. You must thank the Davangere management because they had come voluntarily to hand it over to Government. They have also built a sizeable asset to the tune of Rs. 2 crores. They had passed a unanimous resolution asking the Government to take it over. If at all we have not been able to take it over it is because there are certain legal formalities that will have to be gone into. Davangere college stands on a different footing. It is not so with regard to Manipal and Gulbarga Colleges. They are not prepared to give their hard-earned assets. They have built up their assets out of their sweats. Simply because they are intelligent, simply because they have been enterprising enough, we cannot say no, no, to them. We cannot deny them of their assets. Socialism does not mean 'Rob Peter and pay Paul'. Here socialism is of a different order. In a Socialist State, we cannot ask others whatever they have earned to put it for the benefit of the common man or the society at large.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಹೇಳುತ್ತಾ ಇರುವುದು ಅಮೆರಿಕನ್ ಸಿಸ್ಟಂ ವಿಷಯ.

ಶ್ರೀ ಎಚ್. ಸಿದ್ದವೀರಪ್ಪ.—ಆದ್ದರಿಂದ ಹಿಂದೆ ಯಾವಾಗಲೂ ಅವರ ಮೇಲೆ ಯಾವ ಕಂಟ್ರೋಲ್ ಇರಲಿಲ್ಲ. ಇಷ್ಟು ಕಂಟ್ರೋಲ್ ಅನ್ನು ಈ ಸರ್ಕಾರದವರು ತಂದಿದ್ದಾರೆ. ಒಂದು ರೂಪಾಯಿನ 12 ಆಣೆ ಭಾಗ ಕಂಟ್ರೋಲ್ ಅನ್ನು ತಂದಿದ್ದೇವೆ. ಇವರು ನಮ್ಮ ಆಡಳಿತದ ಹಿಡಿತಕ್ಕೆ ಒಳಪಡಬೇಕು ಮತ್ತು ಅಡ್ಮಿಷನ್ ಮಾಡಬೇಕು, ಇನ್ನು ನಾಲ್ಕಾಣೆ ಭಾಗ ಅಡ್ಮಿಷನ್ ಅನ್ನು ನಾವೇ ಉದ್ದೇಶಪೂರ್ವಕವಾಗಿ ಬಿಟ್ಟಿದ್ದೇವೆ. ಏಕೆಂದರೆ, ಅವರು ಅಡ್ಮಿಷನ್‌ಗೆ ಯಾವ ಹಣವನ್ನೂ ತೆಗೆದುಕೊಳ್ಳದೇ ನಡೆಸಬೇಕಾದರೆ, ಕಷ್ಟ ಇದೆ. ಮಣಿಪಾಲ್‌ನವರ ಮೇಲೆ ಕೈ ಮಾಡಿ ನೋಡಿ ಕೊಳ್ಳುತ್ತಾರೆ, ಇವರ ಮೇಲೆ ಕೈಮಾಡಿ ನೋಡಿಕೊಳ್ಳುತ್ತಾರೆ ಎಂದರೆ ಯಾರೂ ಧಕ್ಷಬ್ರಹ್ಮರು ಅಲ್ಲ. ಎಲ್ಲರೂ ಸರ್ಕಾರದ ಆಡಳಿತಕ್ಕೆ ಒಳಪಡಬೇಕಾಗಿದೆ ಎಲ್ಲರನ್ನೂ ಒಂದೇ ತರಹ ನೋಡಬೇಕಾಗಿದೆ ಎಂದು ಬಿಟ್ಟಿದ್ದೇವೆಯೇ ಹೊರತು ಮಣಿಪಾಲ್‌ನವರಿಗೆ ಯಾವ ರೀತಿಯ ರಿಯಾತಿಯನ್ನೂ ತೋರಿಸಿಲ್ಲ. ಅವರು ಕಾಲೇಜನ್ನು

ಒಳ್ಳೆಯ ರೀತಿಯಲ್ಲಿ ಇಟ್ಟುಕೊಂಡಿದ್ದಾರೆ. ಚೆನ್ನಾಗಿ ನಡೆಸುತ್ತಿದ್ದಾರೆ. ಎಜುಕೇಷನ್ ಪಾಯಿಂಟ್ ಆಫ್ ವ್ಯೂ, ಟೆಕ್ನಿಕಲ್ ಪಾಯಿಂಟ್ ಆಫ್ ವ್ಯೂ, ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ನನಗಾದರೂ ಅನಿಸುತ್ತದೆ. ಇವರ ಮೇಲೆ ಒತ್ತಡ ತಂದಿದ್ದಾರೆ, ನಿಮ್ಮನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ, ಎಂದು ಹೇಳತಕ್ಕಂಥಾದ್ದು ಸತ್ಯಕ್ಕೆ ದೂರವಾದುದು. ಇವತ್ತು ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಒಂದು ವೇಳೆ ತೆಗೆದುಕೊಂಡಿದ್ದೇವೆಂದು ತಿಳಿದುಕೊಳ್ಳೋಣ. ತೆಗೆದುಕೊಂಡರೆ ಹಣಕಾಸಿನ ಪರಿಸ್ಥಿತಿಯಲ್ಲಿ ನಮಗೆ ಬಹಳ ತೊಂದರೆಬರುತ್ತದೆ. ಆದ್ದರಿಂದ ಅದನ್ನು ಮಾಡಿಲ್ಲವೇ ಹೊರತು ಬಾಕಿ ಏನೂ ಇಲ್ಲ ಎಂದು ಈ ಸಭೆಯಲ್ಲಿ ನಾನು ಸವಿನಯದಿಂದ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಐದು ಸಾವಿರ ರೂಪಾಯಿಗಳನ್ನು ಕೊಟ್ಟವರಿಗೆ ಕಾಯಂ ಆಗಿ ಸೀಟು ಕೊಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಸೀಟು ಇದೆ, ಎಷ್ಟು ಕೊಡುತ್ತಾರೆ, ಈ ವರ್ಷದ ಅಡ್ಮಿಷನ್ಸ್ ಎಷ್ಟು ಮಾಡಬೇಕು ಎಂದು ತೀರ್ಮಾನ ಆಗಿಲ್ಲ. ಎರಡು ವರ್ಷದ ಪಿ.ಯು. ಸಿ.ಕೋರ್ಸಿನ ಕೆಲವು ಹುಡುಗರು ಬರುತ್ತಾರೆ. ಹೋದಸಾರಿ ಮಾಡಿದಷ್ಟು ಅಡ್ಮಿಷನ್ ಈ ಸಾರಿ ಮಾಡಲಿಕ್ಕೆ ಆಗುತ್ತದೆಯೋ ಇಲ್ಲವೋ ಯಾವ ಯಾವ ಕಾಲೇಜಿನಲ್ಲಿ ಎಷ್ಟೆಷ್ಟು ಅಡ್ಮಿಷನ್ ಮಾಡಬೇಕು ಎನ್ನುವುದನ್ನು ಇನ್ನು ತೀರ್ಮಾನ ಮಾಡಬೇಕು. ಆಮೇಲೆ ಇದು ಸರಿ ಹೋಗುತ್ತದೆ. ಇನ್ನೊಂದು ವಿಷಯವನ್ನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು. ಇಲಾಖೆಯಲ್ಲಿ ಸೀನಿಯಾರಿಟಿ ಲಿಸ್ಟ್ ಇಲ್ಲ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ, ಮನಸ್ಸಿಗೆ ಬಂದವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ, ಹಾಗೆ ಹೀಗೆ ಎನ್ನತಕ್ಕ ಕೆಲವು ಮಾತುಗಳನ್ನು ಹೇಳಿದರು. ಆ ಜಾತಿಯವರಿಗೆ ಈ ಜಾತಿಯವರಿಗೆ ಹೆಚ್ಚು ಕೆಲಸ ಕೊಟ್ಟಿದ್ದಾರೆ, ಎಂದು ಹೇಳಿದರು, ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕೇಡರ್ ಅಂಡ್ ರೆಕ್ರ್ಯೂಟ್‌ಮೆಂಟ್ ರೂಲ್ಸ್ ಎಷ್ಟು ಇರಬೇಕು, ಯಾವ ರೀತಿ ಸ್ಪಷ್ಟವಾಗಿರಬೇಕು, ಅಷ್ಟು ಈ ಡಿಪಾರ್ಟ್‌ಮೆಂಟಿನಲ್ಲಿ ಇಲ್ಲಿಯವರೆಗೂ ಇಲ್ಲ. ಇದರ ವಿಚಾರದಲ್ಲಿ ನಾನು ಬಹಳ ದೀರ್ಘವಾಗಿ ಯೋಚನೆ ಮಾಡಿದ್ದೇನೆ. ಮತ್ತು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್, ಸೀನಿಯಾರಿಟಿ ಲಿಸ್ಟ್ ಇಲ್ಲದೆ ಅನೇಕ ದೃಷ್ಟಿಯಿಂದ ಅನ್ಯಾಯವಾಗಿದೆ ಎನ್ನತಕ್ಕಂಥಾದ್ದನ್ನು ನಾನು ವಿಚಾರ ಮಾಡಿದ್ದೇನೆ. ಅದಕ್ಕಾಗಿ ನಾನು ಆಗಲೇ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಇನ್ನೂ ನಾವು ತಯಾರು ಮಾಡಬೇಕು ಈಗ ಇದ್ದುದು ಸರಿಯಾಗಿಲ್ಲ. ಇದು ಒಂದೊಂದು ಕಾಲಕ್ಕೆ ಪರಿವರ್ತನೆಯಾಗಿದೆ ಎನ್ನುವ ವಾದ ಇದೆ. ಆದ್ದರಿಂದ ಇವತ್ತು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ನಾವು ಬೇರೆ ಬೇರೆ ರೀತಿಯಿಂದ ಮಾಡಿಸುತಿದ್ದೇವೆ. ಇದನ್ನು ಹೊಸದಾಗಿ ನಾವು ಎಲ್ಲಾ ನೋಡಿ ಪ್ರತಿಯೊಂದನ್ನು ಸರಿಯಾದ ರೀತಿಯಿಂದ ಕೂಲಂಕಷವಾಗಿ ಪರೀಕ್ಷೆಮಾಡಿ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮತ್ತು ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಬೇಕು ಎಂದು ನಾನು ಹೇಳಿದ್ದೇನೆ. ಅದರ ಪ್ರಕಾರ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಈಗ ಆಗುತ್ತಿದೆ. ಇದು ಆದಮೇಲೆ ಬಹುಶಃ ಏನೇನು ತೊಂದರೆಗಳು ಇವೆ, ಅವೆಲ್ಲಾ ಕಡಿಮೆಯಾಗುತ್ತವೆಂದು ನಾನು ತಿಳಿದಿದ್ದೇನೆ. ಶ್ರೀಮಾನ್ ತಿಮ್ಮಪ್ಪನವರು, ಇನ್ನೊಂದು ವಿಷಯವನ್ನು ಹೇಳಿದರು. ಅನೇಕ ನೌಕರಿಗಳನ್ನು ನೇಮಕ ಮಾಡತಕ್ಕದ್ದು ಸರಿಯಲ್ಲ ಎಂದು. ಅಪಾಯಿಂಟ್‌ಮೆಂಟ್ ಮಾಡತಕ್ಕ ಕಾಲದಲ್ಲಿ ನಾವು ಒಂದು ಗಮನದಲ್ಲಿಟ್ಟುಕೊಳ್ಳಬೇಕು. ನಾವು ನೇಮಕ ಮಾಡತಕ್ಕದ್ದು ಟೆಂಪರರಿ ಅಪಾಯಿಂಟ್‌ಮೆಂಟ್ಸ್‌ಗೆ, ಇದು ಸರ್ಕಾರದ ಕರ್ತವ್ಯ ಅಲ್ಲ, ಸರ್ಕಾರಕ್ಕೆ ಸಂಬಂಧಪಟ್ಟದ್ದಲ್ಲ. ಅನೇಕ ಸಾರಿ ನಾನು ಇದನ್ನು ದೀರ್ಘವಾಗಿ ಯೋಚನೆ ಮಾಡಿ ಪ್ರತಿಯೊಂದನ್ನು ಪಬ್ಲಿಕ್ ಸರ್ವಿಸ್ ಕಮಿಷನಗೆ ಬಿಟ್ಟು ಬಿಟ್ಟು ಅವರಂತೆ ಮಾಡಿಸಬೇಕು ಎಂದು ಆರ್ಡರ್ ಮಾಡಬೇಕು ಎನ್ನತಕ್ಕ ಸಮಯದಲ್ಲಿ ಯೋಚನೆ ಮಾಡಿದರೆ, ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಅಪಾಯಿಂಟ್‌ಮೆಂಟ್ಸ್ ಆಗಬೇಕಾದರೆ, 2—3 ವರ್ಷ ತಡವಾಗುತ್ತದೆ. ಇದು ಡೆವಲಪಿಂಗ್ ಡಿಪಾರ್ಟ್‌ಮೆಂಟ್ಸ್, ಇದರಲ್ಲಿ ಇನ್ನೂ ದೊಡ್ಡದಾಗಿ ಹೊಸ ಹೊಸದಾಗಿ ಕಾಲೇಜುಗಳ ಕೆಲವು ಭಾಗಗಳನ್ನು ತೆಗೆಯುತ್ತಿದ್ದೇವೆ; ಆಸ್ಪತ್ರೆಗಳನ್ನು ತೆಗಯುತ್ತಿದ್ದೇವೆ. ನಮ್ಮ ನೀತಿಯ ಪ್ರಕಾರ 15 ಸಾವಿರ ಜನಸಂಖ್ಯೆಗೆ ಒಂದು ಹೆಲ್ತ್ ಯೂನಿಟ್ಟನ್ನಾದರೂ ತೆಗೆಯಬೇಕು ಎಂದು ಇದೆ. ವರ್ಲ್ಡ್ ಬ್ಯಾಂಕ್ ಸ್ಕೀಂ ಪ್ರಕಾರ ನೂರಾರು ಜನ ಡಾಕ್ಟರುಗಳನ್ನು ಅಪಾಯಿಂಟ್ ಮಾಡಬೇಕು. ಅವೆಲ್ಲಕ್ಕೂ ಪಬ್ಲಿಕ್ ಸರ್ವಿಸ್ ಕಮಿಷನನ ಅಪಾಯಿಂಟ್‌ಮೆಂಟ್ಸ್‌ಗೆ ಕಾದರೆ, ಡಿಪಾರ್ಟ್‌ಮೆಂಟ್ ಗ್ರೋತ್‌ಗೆ ತೊಂದರೆ ಬರುತ್ತದೆ. ಈ ದೃಷ್ಟಿಯಿಂದ ನಾವಾದರೂ ಅಪಾಯಿಂಟ್ ಮೆಂಟ್ ಅನ್ನು ಯಾವ ರೀತಿ ಮಾಡಬೇಕು ಎನ್ನತಕ್ಕದಕ್ಕೆ ಒಂದರೆಡು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕಾದ್ದು ಆವಶ್ಯಕ ಎಂದು ನಾನು

(ಶ್ರೀ ಎಚ್. ಸಿದ್ದವೀರಪ್ಪ)

ತಿಳಿದಿದ್ದೇನೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ಸಾವಿರಾರು ರೂಪಾಯಿಗಳ ಸಂಬಳದಿಂದ ಹಿಡಿದು ಕೆಳಗೆ ಇರತಕ್ಕಂಥವರನ್ನೂ ಅಪಾಯಿಂಟ್‌ಮೆಂಟ್ಸ್ ಮಾಡಿದ್ದೇವೆ. ಎಷ್ಟೋ ಜನಕ್ಕೆ ಪ್ರಮೋಷನ್ ಮಾಡಿದೆ, ಯಾವರೀತಿ ಮಾಡಿದೆ ಎನ್ನುವುದನ್ನು ಲೆಕ್ಕ ಹಾಕಿ ನೋಡಿದರೆ, ಇದನ್ನು ನೀವು ಮನಸ್ಸು ಮಾಡುವುದಿಲ್ಲ. ಇದಕ್ಕೆ ಎರಡು ಕಮಿಟಿಗಳು ಇವೆ. ಸ್ಕ್ರೂಟಿನಿಂಗ್ ಕಮಿಟಿ ಒಂದು ಇದೆ, ಅದಕ್ಕೆ ಜಾಯಿಂಟ್ ಸೆಕ್ರೆಟರಿ ಚೇರ್ಮನ್ ಆಗಿರುತ್ತಾರೆ; ಕೆಲವು ಉನ್ನತ ಸೆಕ್ರೆಟರಿಗಳು ಅದರಲ್ಲಿರುತ್ತಾರೆ. ಸ್ಕ್ರೂಟಿನಿ ಕಮಿಟಿ ಆದಮೇಲೆ, ಸ್ಟ್ಯಾಫ್ ಸ್ಕ್ರೂಟಿನಿ ಕಮಿಟಿ ಎಂದು ಇನ್ನೊಂದು ಇದೆ. ನಾವು ಯಾವ ಪ್ರಮೋಷನ್ ಕೊಡಲಿ, ಅದು ಈ ಕಮಿಟಿಗಳ ಮುಂದೆ ಹೋಗಿ ಆ ಕಮಿಟಿಯವರು ಇದನ್ನು ನೋಡಬೇಕಾದರೆ ಯಾವ ರಾಜಕೀಯವೂ ಇಲ್ಲ, ಅವರು ಇದನ್ನು ನೋಡಿ ಯಾರು ಸೀನಿಯಾರಿಟಿಯಲ್ಲಿದ್ದಾರೆ. ಯಾವನು ಯಾವ ಹುದ್ದೆಗೆ ಲಾಯಕು ಇದ್ದಾನೆ, ಎನ್ನುವುದನ್ನು ನೋಡಿ ಅವರು ಶಿಫಾರಸ್ ಅನ್ನು ಕಳುಹಿಸುತ್ತಾರೆ. ಅದನ್ನು ನಾವು ಸರ್ಕಾರದ ಮುಂದೆ ಇಟ್ಟು, ಅದರ ಮೇಲೆ ನಾವು ಆರ್ಡರ್‌ಗಳನ್ನು, ಹುಕುಂಗಳನ್ನು ಮಾಡುತ್ತೇವೆ. ಈ ದೃಷ್ಟಿಯಿಂದ ಪ್ರಮೋಷನ್ ಕಮಿಟಿಯಿಂದ ಬಂದಂಥ ಲಿಸ್ಟಿನಲ್ಲಿ ಯಾವ ದೃಷ್ಟಿಯಿಂದಲೂ ಅವರು ಯಾವ ಶಿಫಾರಸ್ ಮಾಡಿದ್ದಾರೆ ಅದಕ್ಕೆ ವಿರುದ್ಧವಾಗಿ ನಾವು ಯಾವ ಹುಕುಂಗಳನ್ನು ಮಾಡಲಿಕ್ಕೆ ಹೋಗಲಿಲ್ಲ. ಅನೇಕ ಪ್ರೊಫೆಸರ್ಸ್‌ಗಳನ್ನು, ರೀಡರ್ಸ್‌ನ್ನು, ಅಸೋಸಿಯೇಟ್ ಪ್ರೊಫೆಸರ್ಸ್‌ಗಳನ್ನು ಮುಂತಾದ ಹುದ್ದೆಗಳಿಗೆ ನಾವು ಅಲ್ಲಿಂದ ಬಂದಂಥ ಶಿಫಾರಸ್ಸುಗಳನ್ನು ಮುಂದೆ ಇಟ್ಟುಕೊಂಡು ಅದನ್ನು ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅಷ್ಟೇ ಅಲ್ಲ, ಅನೇಕ ಲೆಕ್ಚರರ್ಸ್‌ಗಳನ್ನು, ಅಸಿಸ್ಟೆಂಟ್ ಸರ್ಜನ್ಸ್, ಡೆಂಟಲ್ ಸರ್ಜನ್ಸ್ ಮುಂತಾದ ನೌಕರಿಗಳಿಗೆ ಬೇಕಾದಷ್ಟು ಹೊಸ ಹೊಸದಾಗಿ ಡೆವಲಪ್ ಮಾಡಿದ್ದರಿಂದ, ಈ ಖಾತೆ ಬೆಳೆಯುತ್ತಾ ಇದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ಸುಮಾರು 800ಕ್ಕೂ ಮೇಲ್ಪಟ್ಟು, ಡಾಕ್ಟರುಗಳಿಗೆ ಟೆಂಪರರಿಯಾಗಿ ಹುದ್ದೆಗಳನ್ನು ಕೊಟ್ಟಿದ್ದೇವೆ. ಹಂಗಾಮಿಯಾಗಿ ಕೊಟ್ಟಂಥ ಹುದ್ದೆಗಳಿಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ರವಾನೆ ಮಾಡಿ ಶಾಶ್ವತವಾದ ಹುದ್ದೆಗಳನ್ನಾಗಿ ನಾವು ನೇಮಿಸಿಕೊಂಡಿದ್ದೇವೆ. ಅದನ್ನು ಕಾನೂನು ಪ್ರಕಾರ ಮಾಡಬೇಕು ಎಂದು ತಿಳಿಸಿದ್ದೇವೆ. ಇನ್ ದಿ ಇಂಟರೆಸ್ಟ್ ಆಫ್ ದಿ ಪಬ್ಲಿಕ್ ಸರ್ವೀಸ್, ಎಕ್ಸಿಜೆನ್ಸೀಸ್ ಸರ್ವೀಸ್‌ನಲ್ಲಿ ಜಾಗ್ರತೆಯಾಗಿ ಡಾಕ್ಟರುಗಳು ಬೇಕು, ಈ ಸಮಯದಲ್ಲಿ ಅಪಾಯಿಂಟ್‌ಮೆಂಟ್ ನಾವು ಮಾಡುತ್ತೇವೆ ಎಂದು ಹೇಳಿದ್ದೇವೆ. ಅದರ ಜೊತೆಗೆ ಡಾಕ್ಟರುಗಳ ನಿರುದ್ಯೋಗ ಸಮಸ್ಯೆ ಬಹಳ ಹೆಚ್ಚಾಗಿದ್ದ ಕಾಲದಲ್ಲಿ ಅವರಿಗೆ ನೌಕರಿಗಳನ್ನು ಕೊಡದಿದ್ದರೆ, ಅವರಿಗೆ ಕಷ್ಟವಾಗುತ್ತದೆ. ಅವರು 5—6 ವರ್ಷ ಕಾಲ ಕಷ್ಟಪಟ್ಟು ಕಾಲೇಜಿನಲ್ಲಿ ಓದಿ ಬಂದು ಕೆಲವರು ಪ್ರೈವೇಟ್ ಆಗಿ ಕ್ಲಿನಿಕ್ ಹಾಕಲಿಕ್ಕೆ ಇಷ್ಟಪಟ್ಟರೆ ಹಾಕಬಹುದು, ಇದರಲ್ಲಿ ಯಾವರೀತಿಯ ಭಿನ್ನಾಭಿಪ್ರಾಯವಿಲ್ಲ.

1–30 P.M.

ಅದು ಅಲ್ಲದೆ ಸರ್ಕಾರಿ ನೌಕರಿ ಬೇಕು ಎಂದು ಬಂದಂತ ಕಾಲದಲ್ಲಿ ಆದಷ್ಟು ಅಲ್ಲಲ್ಲಿ ಎಲ್ಲಿ ಕೊಡಲಿಕ್ಕೆ ಸಾಧ್ಯ ಅಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಸರ್ಕಾರದ ಉದ್ದೇಶ್ಯ ಇದ್ದದ್ದು ಎಲ್ಲೆಲ್ಲಿ ಸಾಧ್ಯವೊ, ಎಷ್ಟೆಷ್ಟು ಸಾಧ್ಯವೋ, ಎಷ್ಟು ಜನ ನಿರುದ್ಯೋಗಿಗಳು ಇದ್ದಾರೋ ಆ ನಿರುದ್ಯೋಗಿಗಳಿಗೆ ಅಲ್ಲಲ್ಲೇ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು ಎನ್ನುವ ದೃಷ್ಟಿಯಿಂದ ಅದನ್ನು ಮಾಡಿದ್ದೇವೆ. ಅದಕ್ಕೋಸ್ಕರ ಮೊನ್ನೆ ತಾನೇ ಕೇಂದ್ರ ಸರ್ಕಾರದ ಪ್ಲ್ಯಾನಿಂಗ್ ಕಮೀಷನ್‌ನವರು ಅನ್‌ಎಂಪ್ಲಾಯ್‌ಮೆಂಟ್ ಪರಿಹಾರ ಮಾಡಲು ಯಾವ ರೀತಿ ಅಪರ್‌ಚ್ಯೂನಿಟಿ ಒದಗಿಸಿ ಕೊಡಬೇಕು ಎಂಬ ಬಗ್ಗೆ ಈಗ ಒಂದು ಸ್ಕೀಂ ಮಾಡಿದ್ದಾರೆ. ಅದು ಮಾನ್ಯ ಸದಸ್ಯರಿಗೆ ತಿಳಿದಿರಬಹುದು. ಯಾರ್ಯಾರು ನಿರುದ್ಯೋಗಿಗಳಿದ್ದರೆ ಅವರಿಗೆ ಎಷ್ಟು ಜನ ನಿರುದ್ಯೋಗಿಗಳು ಇದ್ದರೂ ನಾವು ಕೆಲಸ ಕೊಡಲಿಕ್ಕೆ ತಯಾರಿದ್ದೇವೆ ಎಂದು ಒಂದು ಪ್ಲ್ಯಾನ್ ಮಾಡಿ ಅವರಿಗೆ ಬೇಕಾದ ಔಷಧಿ ಸೌಕರ್ಯಗಳನ್ನು ಕೊಟ್ಟು, ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಕೆಲಸ ಮಾಡಬೇಕು ಎಂದು ತಿಳಿಸಿ, ಅವರು ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಅದು ಏನು ದುರ್ದೈವವೋ ಊರುಗಳಿಗೆ ಅನೇಕ ಜನ ಡಾಕ್ಟರುಗಳು ಹಳ್ಳಿಗಳಿಗೆ ಹೋಗಲಿಕ್ಕೆ ಹಿಂದುಮುಂದೆ ನೋಡುತ್ತಾರೆ, ಅದಕ್ಕೆ ಕಾರಣ ಇಲ್ಲದೆ ಇಲ್ಲ. ಅವರಿಗೆ ಸರಿಯಾದ ವಸತಿ ಅಂದರೆ ಮನೆಗಳು ಇಲ್ಲ, ಅಲ್ಲಿ ಯಾವ ಅನುಕೂಲಗಳು ಇಲ್ಲ, ಹೋಗಿ ಇರಲಿಕ್ಕೆ ಸರಿಯಾದ ನೆರಳು ಇಲ್ಲದಂತಹ ಸಮಯದಲ್ಲಿ ನಾವು ಹೇಗೆ ಮಾಡಬೇಕು ಎನ್ನುವುದು ಕೆಲವರ ವಾದ ಇದೆ. ಆದುದರಿಂದ ನಾನು ಸಭೆಯ ಮೂಲಕ, ಅಧ್ಯಕ್ಷರೇ, ಕೇಳಿಕೊಳ್ಳುವುದು ಏನು ಎಂದರೆ ನಮ್ಮ ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ಆರೋಗ್ಯದ ಅನುಕೂಲಗಳು ಸಿಕ್ಕ

ಬೇಕು ಎನ್ನುವ ಪರಿಸ್ಥಿತಿಯನ್ನು ಅರಿತುಕೊಂಡು, ಅದನ್ನು ಗಣನೆಗೆ ತೆಗೆದುಕೊಂಡು ಈ ಸಭೆಯ ಮಾನ್ಯಸದಸ್ಯರಿಗೂ ಆ ಅಭಿಪ್ರಾಯ ಇದೆಯೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಸರ್ಕಾರದ ಜೊತೆಗೆ ಸಹಕರಿಸಿ ಎಲ್ಲೆಲ್ಲಿ ಆಸ್ಪತ್ರೆಗಳು ಕೇಳುತ್ತಾರೆ ಅಲ್ಲಿ ಪ್ರಥಮತಃ ಆಸ್ಪತ್ರೆ ಇಡುವುದಕ್ಕೆ ಜಾಗ, ಅಲ್ಲದೆ ಆ ಡಾಕ್ಟರುಗಳು ಮತ್ತು ಸಿಬ್ಬಂದಿ ವರ್ಗ ಏನು ಇದೆ ಅವರು ಇರಲಿಕ್ಕೆ ಮನೆ ಅಥವಾ ವಸತಿ ಅನುಕೂಲ ಮಾಡಿಕೊಡತಕ್ಕ ಜವಾಬ್ದಾರಿ ತಾವು ಹೊರಬೇಕು. ತಾವು ಹೊರದೆ ಇದ್ದರೆ ಆ ಸ್ಥಳದಲ್ಲಿ ಜಾಗ ಸಿಕ್ಕುವುದಿಲ್ಲ ಎಂದು ಅದನ್ನು ಅಕ್ವೈರ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆದರೆ, ನಿಮ್ಮ ಊರಿಗೆ ಆಸ್ಪತ್ರೆ ಬರುತ್ತದೆ, ಸಹಕಾರ ಕೊಡಬೇಕು ಎಂದು ಕೇಳಿದಾಗ ಸಹಕಾರ ಕೊಡದೆ ಇದ್ದರೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಎಲ್ಲೆಲ್ಲಿ ಆಸ್ಪತ್ರೆಗಳನ್ನು ಕೇಳುತ್ತಾರೆ, ಸರ್ಕಾರದವರು ದುಡ್ಡು ಕೊಡುತ್ತಾರೆ. ಪಿಡಬ್ಲ್ಯುಡಿಯಿಂದಲೇ ಕಟ್ಟಬೇಕು, ಹೇಗೆ ಕಟ್ಟಬೇಕು ಎನ್ನುವ ನಿಯಮ ಬೇಕಿಲ್ಲ. ನಿಮ್ಮ ಹಳ್ಳಿಗಳಲ್ಲಿ ಇರತಕ್ಕ ಜನ ಯಾವ ರೀತಿ ಸುಲಭವಾಗಿ ಮನೆಗಳಲ್ಲಿ ವಾಸವಾಗಿರುತಾರೆ ಅಂಥ ಮನೆಗಳನ್ನು ಕಟ್ಟಲಿಕ್ಕೆ ಎಷ್ಟು ದುಡ್ಡು ಹಿಡಿಯುತ್ತದೆ ಅಷ್ಟು ದುಡ್ಡು ಸುಮಾರು ನನ್ನ ಅಭಿಪ್ರಾಯದಲ್ಲಿ 10 ಸಾವಿರ ರೂಪಾಯಿಗೂ ಹೆಚ್ಚಿಗೆ ಬೇಕಾಗುವುದಿಲ್ಲ ಎಂದು ತಿಳಿದಿದ್ದೇನೆ. ಆ ರೀತಿ ಅವಕಾಶ ಮಾಡಿಕೊಡದೆ ಹೋದರೆ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿದರೂ ಹೊಳೆಯಲ್ಲಿ ಹುಣಸೆ ಹಣ್ಣನ್ನು ಕಲಸಿದ ಹಾಗೆ ಆಗುತ್ತದೆ. ಆದುದರಿಂದ ಮಾನ್ಯಸದಸ್ಯರು ಸರ್ಕಾರಕ್ಕೆ ಸಹಾಯವಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆಸ್ಪತ್ರೆ ಕೊಡಲಿಲ್ಲವೆಂದು ಹೇಳುತ್ತಾರೆ. ಕೇಂದ್ರಸರ್ಕಾರದ ನೀತಿ ಆದರೂ ಪ್ರತಿ 15 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆ ಇರತಕ್ಕದ್ದು ಎಂದು ಇದೆ. ಈಗ 80 ಸಾವಿರ ಜನಸಂಖ್ಯೆ ಇದ್ದರೆ 15 ಸಾವಿರಕ್ಕೆ ಒಂದು ಮಾಡಬೇಕು ಎನ್ನುವ ದೃಷ್ಟಿ ಇರಬೇಕಾದರೆ ಸರ್ಕಾರದವರು 100 ಹೊಸ ಆಸ್ಪತ್ರೆಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಈಗ ಅದನ್ನು ತಾವು ಉಪಯೋಗಿಸಿಕೊಂಡು ಕೆಲಸಮಾಡಬೇಕು, ಸರ್ಕಾರಕ್ಕೆ ಸಹಾಯಮಾಡಬೇಕು. ಕೆಲಸ ಎಂದರೆ ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ಸಹಾಯ ಮಾಡಬೇಕು ಎಂದು ಬೇಡಿಕೊಳ್ಳುತ್ತೇನೆ. ಈಗ ನೌಕರಿ ಕೊಟ್ಟಿದ್ದಾರೆ. ಎಲ್ಲಿ ಇದ್ದರೂ ನೌಕರಿ ಕೊಡುತ್ತಾರೆ, ಎಷ್ಟೋ ಜನರಿಗೆ ಕೊಟ್ಟಿದ್ದಾರೆ, ಈಗ ಅದರ ವಿಚಾರದಲ್ಲಿ ದೊಡ್ಡದಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇನ್ನು ಮುಂದೆಯೂ ಕೊಡುತ್ತಾರೆ, ಕೇಳಲೇ ಬೇಕಾಗಿಲ್ಲ, ಕೊಡುತ್ತಾರೆ ಅಷ್ಟುಮಾತ್ರ ಹೇಳುತ್ತೇನೆ. ಜಾತಿ ಆಧಾರದಮೇಲೆ ಮಾಡಬೇಕು ಎಂದು ಮನಸ್ಸು ಸರ್ಕಾರಕ್ಕೆ ಇಲ್ಲ, ನಾವು ಅದನ್ನು ಎಂದೂ ಗಮನದಲ್ಲಿ ಇಟ್ಟುಕೊಳ್ಳಲಿಲ್ಲ. ಹಿಂದೆ ಮಾಡಿಲ್ಲ, ಮುಂದೆ ಮಾಡುವುದೂ ಇಲ್ಲ. ಕೆಲವರಿಗೆ ಧರ್ಮಕರ್ಮ ಸಂಯಮವಿಲ್ಲ. ಹಿಂದೆ ಅಧಿಕಾರದಲ್ಲಿ ಬರುವಾಗ ರಾಜ್ಯದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರ ಹತ್ತಿರ ಹೋಗಿ ಏನು ಸ್ವಾಮಿ ದೇಶದ ಜನಕ್ಕೆ ಯಾವರೀತಿ ಆಡಳಿತವನ್ನು ಮಾಡಬೇಕು, ಹೇಗೆ ಮಾಡಿದರೆ ಸರಿ ಹೋಗುತ್ತದೆ ಎಂದು ಅವರ ಹತ್ತಿರ ನಾನು ಇಂಡಸ್ಟ್ರೀಸ್ ಮಿನಿಷ್ಟರ್ ಆಗಿದ್ದಾಗ ಹೋಗಿ ಕೇಳಿದಾಗ ತೆರೆದ ಹೃದಯದಿಂದ ಅವರು ಹೇಳಿದರು ನಾನು ಯಾವಜಾತೀಯ ಅಭಿಮಾನ ಇಟ್ಟುಕೊಳ್ಳದೆ ಇದ್ದರೂ ನನಗೂ ಜನರು ಏನೇನೋ ಹೇಳುತ್ತಿದ್ದಾರೆ, ಅವರೂ ಜಾತ್ಯಾತೀತ ರಾಷ್ಟ್ರವನ್ನು ಮಾಡತಕ್ಕ ಆಡಳಿತವನ್ನೂ ದೇಶದಲ್ಲಿ ಕೊಡಬೇಕು ಎಂದು ಅವರು ಹೇಳಿದ ರೀತಿ, ಅವರ ಅಂದಾವತೆಯಲ್ಲಿ ಪಾಠ ಕಲಿತವರ ಪೈಕಿ ನಾನು ಒಬ್ಬ. ಬೇರೆಯವರು ಕಲಿತಿದ್ದಾರೋ ಏನೋ ನನಗೆ ಗೊತ್ತಿಲ್ಲ. ನಾನಂತು ಜಾತಿವಾದಿಯಲ್ಲ ನನಗೆ ಆ ಸ್ವಭಾವವಿಲ್ಲ. ನಾನು ಅಧಿಕಾರ ಬಿಟ್ಟು ಹೋಗುವ ಕಾಲದಲ್ಲಿ ಏನು ನಡೆಯಿತೋ ಗೊತ್ತಿಲ್ಲ. ಅದಕ್ಕೋಸ್ಕರ ಬೇರೆಯವರ ವಿಷಯ ನಾನು ಹೇಳುವುದಿಲ್ಲ. ನಾನು ಹೇಳುತ್ತೇನೆ, ನಮ್ಮ ರಾಜ್ಯದಲ್ಲಿ ಜಾತಿಯಲ್ಲಿ ಬ್ರಾಹ್ಮಣರು ಒಳ್ಳೆಯ ನೌಕರಿಯನ್ನು ಹೊಂದಿರುತ್ತಾರೆ ಎಂದು ಹೇಳುವುದು ತಪ್ಪು. ಬ್ರಾಹ್ಮಣರು ಬುದ್ಧಿಯಲ್ಲಿ ಹೆಚ್ಚಿಗೆ ಇದ್ದಾರೆ, ಅವರು ನಮ್ಮ ರಾಜ್ಯದವರೇ, ಬಾಕಿಯವರೂ ನಾವು ಬ್ರಾಹ್ಮಣರ ಲೆವೆಲ್ಲಿಗೆ ಬರುವುದಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕದ್ದು ನಮ್ಮ ಗುರಿ ಆಗಿರಬೇಕು. ಅವರು ಹಾಗೆ, ಅವರು ಹೀಗೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ ರಾಜ್ಯದಲ್ಲಿ ಇರತಕ್ಕ ಉನ್ನತ ಡಾಕ್ಟರುಗಳು ನೂರಾರು ಜನ ಈ ದೇಶದಲ್ಲಿ ಜಾತಿಯ ಪಿಡುಗನ್ನು ತಡೆಯಲಾರದೆ ಬೇರೆ ದೇಶಗಳಿಗೆ ಹೋಗಿ, ಸಹಸ್ರಾರು ಮೈಲು ದೂರದಲ್ಲಿ ಸುಖವಾಗಿ ಇದ್ದಾರೆ. ಅವರು ಹೇಳುತ್ತಾರೆ ಇಲ್ಲಿಗೆ ಬಂದರೆ ಫ್ರೀಯಾಗಿ ವರ್ಕ್ ಮಾಡುವ ಅವಕಾಶ ಇರಬೇಕು ಎಂದು. ಬೇರೆ ದೇಶದಲ್ಲಿ Merit is the only consideration. If you are a merited man, and if you work hard, for the Doctor, sky is the limit for earning in those countries.

(ಶ್ರೀ ಎಚ್. ಸಿದ್ದವೀರಪ್ಪ)

ಬರೀ ಅರ್ನಿಂಗ್ ಬೇಡ ಜನಗಳನ್ನು ಅನುಸರಿಸಿ ಹೋಗತಕ್ಕ ವಾತಾವರಣವನ್ನು ಆದರೂ ನಾವು ಕಲ್ಪನೆ ಮಾಡಬೇಕಾದುದು ನಮ್ಮ ಕರ್ತವ್ಯ. ಆದ್ದರಿಂದ ನಾವಾದರೂ ಹೇಳುತ್ತೇನೆ. ಅಡ್ಮಿಷನ್‌ನಲ್ಲಿ ತಮಗೆಲ್ಲಾ ಗೊತ್ತಿದೆ ಆಡಳಿತಾಧಿಕಾರಿಗಳು ಬೈ ಮೆರಿಟ್ ಯಾವನು ಕಷ್ಟಪಟ್ಟು ಓದುತ್ತಾನೆ, ಯಾವನಿಗೆ ಹೆಚ್ಚು ಮಾರ್ಕ್ಸ್ ಇದೆ ಅವನನ್ನು ಆರಿಸುತ್ತಾರೆ. ಅವನಿಗೆ ಸೀಟು ಹೋಗುತ್ತದೆ. ಈ ದೃಷ್ಟಿಯಿಂದ ನಾವು ಮಾಡತಕ್ಕ ಅಡ್ಮಿಷನ್, ನಾವು ಸ್ಯಾಂಕ್ಷನ್ ಮಾಡಿದರೆ ಹ್ಯಾವ್‌ನಾಟ್ಸ್ ಯಾವ ಸ್ಟ್ಯಾಂಡರ್ಡ್‌ಗೆ ಬರಬೇಕೆಂದು ಹೇಳುತ್ತಾರೆ ಅಂತಹವರಿಗೆ ನಾವು ಅವರು ಹೆಚ್ಚಿನ ಕ್ಲಾಸಿನಲ್ಲಿ ಪಾಸ್ ಆಗದಿದ್ದರೂ ಚಿಂತೆಯಿಲ್ಲ ಹಳ್ಳಿಗಾಡಿನಿಂದ ಬಂದಿರತಕ್ಕ ಬ್ಯಾಕ್‌ವರ್ಡ್ಸ್ ಕ್ಲಾಸ್‌ನವನಿಗೆ ಅದ್ಯ ಗಮನಕೊಟ್ಟು ಅಡ್ಮಿಷನ್ ಮಾಡಿ ಮುಂದೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರನ್ ಪ್ರಕಾರ ಹಿಂದುಳಿದವರು ಮುಂದಕ್ಕೆ ಬರಬೇಕು ಎನ್ನುವುದರಲ್ಲಿ ನಮಗೂ ನಿಮಗೂ ಯಾವ ಭಿನ್ನಾಭಿಪ್ರಾಯವಿಲ್ಲ. ಇದನ್ನೇ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಹೋದರೆ ಮೆಷರಿಂಗ್ ರಾಡ್ ಇಟ್ಟುಕೊಂಡಿರುತ್ತಾರೆ, 58 ಬಂದವನಿಗೆ ಕೊಡುತ್ತಾರೆ, 57 ಬಂದವನಿಗೆ ಮನೆಗೆ ಹೋಗು ಎಂದು ಹೇಳುತ್ತಾರೆ. ಇದನ್ನು ಯಾವ ದೃಷ್ಟಿಯಿಂದ ಬದಲಾವಣೆ ಮಾಡಲಿಕ್ಕೆ ಹೋದರೂ ಹಿಂದುಳಿದ ಪಂಗಡದವರಿಗೆ ಅನ್ಯಾಯವಾಗಬಾರದು, ಟ್ಯಾಲೆಂಟೆಡ್ ಯಾರು ಇದ್ದಾರೆ ಅವರಿಗೆ ತೊಂದರೆ ಆಗಬಾರದು ಆ ದೃಷ್ಟಿಯಿಂದ ತೆಗೆದುಕೊಂಡು ಹೋಗಬೇಕು ಎನ್ನುವುದೇ ನನ್ನ ಉದ್ದಿಶ್ಯ. ಈ ದೃಷ್ಟಿಯಿಂದಲೇ ಡಿಪಾರ್ಟ್‌ಮೆಂಟ್‌ಗಳಲ್ಲಿ ಅನೇಕ ನೌಕರಿಗಳನ್ನು, ನೂರಾರು ನೌಕರಿಗಳನ್ನು ಕೊಟ್ಟಿದ್ದೇವೆ. ಈ ದೃಷ್ಟಿಯಿಂದಲೇ ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ಡ್ ಟ್ರೈಬ್ಸ್ ಎನ್ನತಕ್ಕ ಯಾವ ಅತಿ ಹಿಂದುಳಿದಿರತಕ್ಕ ನಿಮ್ನವರ್ಗ ಇದೆ ಅವರಲ್ಲಿ ಎಷ್ಟು ಜನರು ಬಂದರೂ ನೌಕರಿ ಖಾಲಿ ಇದ್ದರೆ ಮೊದಲು ಅವರಿಗೆ ಕೊಡಬೇಕೆಂದು ಹೇಳುತ್ತೇನೆ. ನನ್ನ ಹತ್ತಿರ ಲಿಸ್ಟ್ ಇದೆ. ಈಗ ಮಾಡಿರತಕ್ಕ ಅಡ್ಮಿಷನ್ ಪ್ರಕಾರ ಇವೊತ್ತಿಗೂ ಅವರಿಗೆ 5.5 ಪರ್ಸೆಂಟ್ ಹೆಚ್ಚಿಗೆ ಕೊಡಲಿಕ್ಕೆ ಆಗಲಿಲ್ಲ. ಅವರಿಗೆ 18 ಪರ್ಸೆಂಟ್ ಕೊಡಬೇಕು ಎಂದೂ ಇದ್ದರೂ ಒಂದಾನೊಂದು ಕಾಲದಲ್ಲಿ ಅಪ್ಲಿಕೇಶನ್ಸ್ ಇರುತ್ತಾ ಇರಲಿಲ್ಲ. ಈಗ ನನಗೆ ಸಂತೋಷವಾಗುತ್ತಿದೆ, ಅಪ್ಲಿಕೇಷನ್ಸ್ ಬರುತ್ತಾ ಇವೆ, ನಾವು ಅದನ್ನು ಸಮಾಜವಾದ ದೃಷ್ಟಿಯಿಂದ ನೋಡಬೇಕು, ಎನ್ನತಕ್ಕದ್ದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಮಾನ್ಯಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಡಿಪಾರ್ಟ್‌ಮೆಂಟಲ್ ಪ್ರೊಮೋಷನ್ಸ್ ಮಾಡಲಿಕ್ಕೆ, ನಾನು ತಮಗೆ ತಿಳಿಸಿದೆ, ಒಂದು ಸಾವಿರ ರೂಪಾಯಿಯವರೆಗೆ ಹೋಗತಕ್ಕ ಕೆಲವು ನೌಕರಿಗಳು ಅಂತಹವು ಇವೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಇವೊತ್ತಿಗೂ ಕೆಲವು ಕಾಲೇಜುಗಳಿಗೆ ರೆಕಗ್‌ನಿಷನ್ ಕೊಟ್ಟಿಲ್ಲ. ಅವರು ರೆಕಗ್‌ನಿಷನ್ ಕೊಡದೆ ಇದ್ದರೆ ಅಲ್ಲಿ ಓದಿರತಕ್ಕ ವಿದ್ಯಾರ್ಥಿಗಳಿಗೆ ಮುಂದೆ ಅನುಕೂಲವಾಗುತ್ತದೆ. ಉದಾಹರಣೆಗೆ ಬಳ್ಳಾರಿಗೆ ರೆಕಗ್‌ನಿಷನ್ ಕೊಟ್ಟಿಲ್ಲ, ಕಾರಣ ಏನು ಎಂದರೆ ಅಲ್ಲಿ ಯಾವ ಸ್ಟ್ಯಾಫ್ ಪ್ಯಾಟರನ್ ಇರಬೇಕು ಆ ಪ್ಯಾಟರನ್ ಪ್ರಕಾರ ಹುದ್ದೆಗಳನ್ನು ತುಂಬಿಲ್ಲ, ಆದುದರಿಂದ ಕೊಡುವುದಿಲ್ಲ ಎಂದು ಹೇಳಿದಮೇಲೆ ಈ ವರ್ಷ ಅಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಕೋರ್ಸ್ ಇದೆ ಬಳ್ಳಾರಿ ಮುಂತಾದ ಮೆಡಿಕಲ್ ಕಾಲೇಜುಗಳಲ್ಲಿ ನೇಮಕವಾದ ಸ್ಟ್ಯಾಫ್ ಇದ್ದರೂ ಖಾಲಿ ಜಾಗಗಳಿಗೆ ನೇಮಕ ಮಾಡತಕ್ಕ ಕಾಲದಲ್ಲಿ ಅನೇಕ ದೊಡ್ಡ ದೊಡ್ಡ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಹೊರಟಿದ್ದೇವೆ.

ಈ ಮೆಡಿಕಲ್ ಡಿಪಾರ್ಟ್‌ಮೆಂಟಿನ ಬೆಳವಣಿಗೆ ಬಗ್ಗೆ ಮಾನ್ಯ ಸಹೋದ್ಯೋಗಿಗಳು ಕೊಟ್ಟಂಥ ಸಲಹೆಗಳನ್ನು ತೆರೆದ ಹೃದಯದಿಂದ ನೋಡುವುದಲ್ಲದೆ ಎಷ್ಟೇ ಹಣಕಾಸಿನ ತೊಂದರೆ ಇದ್ದಾಗ್ಯೂ ಕೂಡ ಹಣದ ಮಂಜೂರಾತಿ ಕೊಟ್ಟು ವಿದ್ಯಾರ್ಥಿಗಳನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ನಾನು ಹಾಕಿದ ಪ್ರಪೋಸಲ್ಸ್‌ಗಳನ್ನು ನಮ್ಮ ಸಹೋದ್ಯೋಗಿಗಳು ಆಕ್ಸೆಪ್ಟ್ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ಅವರಿಗೆ ನಾನು ಋಣಿಯಾಗಿದ್ದೇನೆ ಮತ್ತು ಅವರನ್ನು ಅಭಿನಂದಿಸುತ್ತೇನೆ.

ಇನ್ನು ನಿನ್ನೆ ದಿವಸ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಮತ್ತು ಶ್ರೀಮಾನ್ ಸಿ. ಎಂ. ಆರ್ಮುಗಂರವರು ಮೆಡಿಕಲ್ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್ ಬಗ್ಗೆ ಹೇಳಿದರು. ಈ ಬಗ್ಗೆ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ವಿಚಾರದಲ್ಲಿ ಒಂದು ಬಿಲ್ ತಯಾರಾಗುತ್ತಾ ಇದೆ. ಅದು ಸಭೆಯ ಮುಂದೆ ಬರುತ್ತದೆ. ಆವಾಗ ತಮ್ಮ ಸಲಹೆಯನ್ನು ಕೊಡಬಹುದು. ಇದನ್ನು ಮಾಡಿ ನಾನು ಹೊಗಳಿಸಿಕೊಳ್ಳಬೇಕೆಂದಲ್ಲ. ಇದರ ಉದ್ದೇಶ ಏನೆಂದರೆ ಮೈಸೂರು ರಾಜ್ಯದಲ್ಲಿ ಇದು ಸರಿಯಾಗಿ ಬೆಳವಣಿಗೆಯಾಗಲಿ ಎನ್ನುವ ಉದ್ದೇಶ, ನಮ್ಮ ರಾಜ್ಯದಲ್ಲಿ

ಸುಮಾರು 15 ಸಾವಿರ ವಿದ್ಯಾರ್ಥಿಗಳಿಗೆ ಮೆಡಿಕಲ್ ಎಜುಕೇಷನ್ ಯಾವರೀತಿಯಾ ಒದಗಿಸಬೇಕು ಅನ್ನುವುದನ್ನು ನೋಡಬೇಕು. ಇದು ನೆಕ್ ಟೈ ಕಾಲರ್ ಎಜುಕೇಷನ್ ಅಷ್ಟೇ ಅಲ್ಲ. ಅವರು ನಿಜವಾಗಿಯೂ ಹಳ್ಳಿಗಾಡಿನವರ ಜೊತೆಯಲ್ಲಿ ಓಡಾಡಿ, ಆ ಜನತೆಯ ಜೊತೆಗೆ ಬೆರೆತು ಅವರು ಕಲಿತಿರತಕ್ಕಂಥ ವಿದ್ಯೆಯನ್ನು ಆ ಜನತೆಗೆ ಕೊಡಬೇಕು. ಇದರ ಬಗ್ಗೆ ಸಂಬಂಧಪಟ್ಟ ಒಂದು ಕರಿಕ್ಯೂಲಮ್ ಮತ್ತು ಸಿಲಬಸ್ ಬದಲಾವಣೆಯಾಗಬೇಕು. ಈ ಕಾಲೇಜುಗಳಲ್ಲಿ ಡಿಗ್ರಿ ಕೊಡುವು ದಕ್ಕೆ ಮುಂಚೆ ಹುಡುಗರು ಆ ಹಳ್ಳಿಗಳ ಜನರ ಜೊತೆಯಲ್ಲಿ ಹೋಗಿ ಅವರ ಸಂಪರ್ಕ ಇಟ್ಟುಕೊಂಡು ಅವರ ಜೊತೆಯಲ್ಲಿ ಹೊಂದಿಕೊಂಡು ಕೆಲಸ ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದೆ. ಅದರ ಜೊತೆಗೆ ಆಲೋಪಥಿಕ್ ಸಿಸ್ಟಂ ಒಂದೇ ಅಲ್ಲ, ಇದರ ಜೊತೆಗೆ ಇಂಡಿಯನ್ ಮೆಡಿಸನ್ ಸಿಸ್ಟಂ ಆದ ಆಯುರ್ವೇದ, ಯುನಾನಿ ಮತ್ತು ಆಲೋಪಥಿ ಇದೂ ಕೂಡ ಬೆಳವಣಿಗೆ ಆಗಬೇಕು. ಶ್ರೀಮಾನ್ ಟಿ. ಆರ್. ಶಾಮಣ್ಣನವರು ಮತ್ತು ಶ್ರೀಮಾನ್ ಎಂ. ವಿ. ರುದ್ರಪ್ಪನವರು ನ್ಯಾಚುರೋಪತಿ ವಿಷಯವಾಗಿ ಹೇಳಿದರು. ಅದನ್ನೂ ಕೂಡ ಇದರಲ್ಲಿ ಸೇರಿಸಬೇಕಾಗುತ್ತದೆ. I think that treatment is best, no medicine is used. ಇದು ನನ್ನ ಸ್ವಂತ ಅನುಭವ. ಕೆಲವರು ಈಗತಾನೇ ಬಂದಿದ್ದೀರಿ. ಕೆಲವರು ಈಗತಾನೇ ಅದನ್ನು ತಿಳಿದುಕೊಂಡಿದ್ದೀರಿ. ಈವೊತ್ತಿನ ದಿವಸ ಇರತಕ್ಕಂಥ ಸಮಾಜದಲ್ಲಿ ಏನಾಗಿದೆ ಎಂದರೆ ನಾವು ಮಾಡತಕ್ಕಂಥ ಜೀವನ ಮತ್ತು ನಾನು ಮಾಡತಕ್ಕಂಥ ವಾಸದಲ್ಲಿ ಒಂದು ಇಂಜಕ್ಷನ್ ತೆಗೆದುಕೊಂಡರೆ ಸಾಲುವುದಿಲ್ಲ, 10 ಇಂಜೆಕ್ಷನ್ ತೆಗೆದು ಕೊಳ್ಳಬೇಕಾಗುತ್ತದೆ. ಈ ನವನಾಗರೀಕ ಜೀವನದಲ್ಲಿ ಈರೀತಿ ಪರಿಸ್ಥಿತಿ ಇದೆ. ಈ ಬಗ್ಗೆ ದೂರ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕು ಎಂದು ನಾನಾದರೂ ಕೂಡ ಹೇಳುತ್ತೇನೆ. ಆದುದರಿಂದ ಈ ನೇಚರ್‌ಕ್ಯೂರ್ ಏನು ಇದೆ ಅದು ಬಹಳ ಸಾಧುವಾದುದು. ಇದನ್ನು ಬೇಕಾದರೆ ಪರೀಕ್ಷೆ ಮಾಡಿ ನೋಡಿ. ಇದನ್ನು ನಾವು ಅಲ್ಲಗಳೆಯುವ ಹಾಗಿಲ್ಲ. ಡಾ. ಮೇಲುಕೋಟೆಯವರು ಇದಕ್ಕೆ ಸಂಬಂಧ ಪಟ್ಟ ಹಾಗೆ ಒಂದು ರಿಪೋರ್ಟ್‌ನ್ನು ಈಗತಾನೇ ಕೊಟ್ಟಿದ್ದಾರೆ. ಅದು ಬಹಳ ಚೆನ್ನಾಗಿದೆ. ಅದರಲ್ಲಿರತಕ್ಕಂಥಾದ್ದು ನಮ್ಮ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್ಸ್‌ನ್ನು ಇಂಪ್ರೂ ಮಾಡಬೇಕೆಂಬ ವಿಚಾರ. ಅದರ ಜೊತೆಗೆ ಬಾಕಿ ಸಿಸ್ಟಂಸ್ ಆಫ್ ಮೆಡಿಸನ್ಸ್ ಕೂಡ ಇರಬೇಕು. ಹಿಂದೆ ಇದ್ದ ಹಾಗೆ ಕೆಲವರಿಗೆ ಈ ಬಗ್ಗೆ ಇನ್ನೂ ಒಳ್ಳೆ ಅಭಿಪ್ರಾಯ ಇದೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ ಧಾನ ಧರ್ಮ ಮಾಡಬೇಕು. ಒಂದು ಆಸ್ಪತ್ರೆ ಒಂದು ಸ್ಕೂಲ್ ಕಟ್ಟಿಸಿಕೊಡಬೇಕು ಎನ್ನುವ ಮನೋಭಾವನೆ ಇದೆ. ನಾವು ಉಳ್ಳವರು ಎಂದು ಏನು ಹೇಳುತ್ತೇವೆಯೋ ಅವರು ಮುಂದೆ ಬಂದು 1 ಲಕ್ಷ 2 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಸಮಾಜದ ಸಹ ಕಾರವೂ ಬೇಕು. ಉದಾಹರಣೆಗೆ ಗೌರಿಬಿದನೂರಿನಲ್ಲಿ ಆಸ್ಪತ್ರೆಯನ್ನು ಸ್ಥಾಪಿಸಲು ಅಲ್ಲಿ ಪ್ರತಿನಿಧಿ ಗಳ ಸಹಾಯದಿಂದ 2½—3 ಲಕ್ಷ ರೂಪಾಯಿಗಳು ದಾನ ಬಂದಿವೆ, ಹಾಗೆ ದುಡ್ಡು ಇರತಕ್ಕಂಥಾ ವರು ಆಸ್ಪತ್ರೆಗಳನ್ನು ಕಟ್ಟಿಸಬೇಕೆಂದು ಡೊನೇಷನ್ ಕೊಡುವುದಕ್ಕೆ ಪ್ರಯತ್ನಪಡುತ್ತಾರೆ. ಆದುದರಿಂದ ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿರೋಧ ಪಕ್ಷದವರು ಸರ್ಕಾರವನ್ನು ಸದಾ ಬಯ್ಯುವುದರಲ್ಲಿ ಕಾಲಹರಣ ಮಾಡದೆ ವರ್ಷಕ್ಕೆ ಈರೀತಿ 5 ಆಸ್ಪತ್ರೆಗಳ ಬಿಲ್ಡಿಂಗ್‌ಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿ. ಅದರಿಂದ ನಿಮ್ಮ ಕ್ಷೇತ್ರಕ್ಕೆ ಹೆಚ್ಚಿನ ಸಹಾಯ ಮಾಡಿದಂತಾಗುವುದಲ್ಲದೆ ನಿಮಗೂ ಒಳ್ಳೆಯದಾಗುತ್ತದೆ ಎಂದು ನಾನಾದರೂ ತಿಳಿಸಿದ್ದೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಹಾಗಾದರೆ ನಿಮ್ಮ ಕೆಲಸ ಏನು ?

ಶ್ರೀ ಹೆಚ್. ಸಿದ್ದವೀರಪ್ಪ.—ನಮ್ಮ ಕೆಲಸ ಏನು ಎಂದರೆ ಆಸ್ಪತ್ರೆ ಸ್ಥಾಪಿಸಲು ಸ್ಯಾಂಕ್ಷನ್ ಮಾಡುವುದು ಮತ್ತು ಅದನ್ನು ದೀಪ ಹಚ್ಚಿಸಿಕೊಂಡು ನಡೆಸಿಕೊಂಡು ಹೋಗುವುದು.

ಇನ್ನು ಈವೊತ್ತಿನ ದಿವಸ ಅನೇಕ ರೀತಿಯ ಸ್ಪೆಷಲ್ ಹಾಸ್ಪಿಟಲ್ಸ್ ಮಾಡಬೇಕು ಎನ್ನುವ ಯೋಚನೆ ನಮಗೆ ಇದೆ. ಈ ಕುಷ್ಟ ರೋಗ ಆಗಲಿ, ಟ್ಯೂಬರ್‌ಕ್ಯೂಲೋಸಿಸ್ ಆಗಲಿ, ಮೆಂಟಲ್ ಸ್ಪೈನ್ಸ್‌ಸ್ ಆಗಲಿ ಇವುಗಳಿಗೆ ಸಂಬಂಧಪಟ್ಟ ಸೈಕಿಯಾಟಿಕ್ ಬ್ರಾಂಚ್ ಪ್ರತಿಯೊಂದು ಜಿಲ್ಲೆಯಲ್ಲೂ ಇರಬೇಕು ಎಂದು ನಾವು ಪ್ರಯತ್ನಿಸುತ್ತಿದ್ದೇವೆ. ಇದರ ಜೊತೆಗೆ ಬಹಳ ವರ್ಷದಿಂದಲೂ ನಮ್ಮಲ್ಲಿ ಮಲೇರಿಯಾ ರೋಗ ಇರಲಿಲ್ಲ. ಅದನ್ನು ಪೂರ್ಣವಾಗಿ ನಾವು ಮರೆತಿದ್ದೆವು. ಈಗ ಮತ್ತೆ ಅದು ಉಲ್ಬಣಾವಸ್ಥೆಗೆ ಬರುತ್ತಾ ಇದೆ. ಆದುದರಿಂದ ಅದರ ನಿವಾರಣೆಗೆ ಹೆಚ್ಚು ಸ್ಟ್ಯಾಫ್ ಮಾಡಿ, ಅದನ್ನು ತಡೆಗಟ್ಟಲು ಹೆಚ್ಚು ಹಣ ಖರ್ಚು ಮಾಡಬೇಕು. ಅದನ್ನು ತಡೆಗಟ್ಟಲು ನಾವು ವಿಧಾನ ಗಳನ್ನು ಕಂಡುಹಿಡಿಯಬೇಕು. ಅದು ನಾವು ಗಟ್ಟಿಯೋ, ನೀವು ಗಟ್ಟಿಯೋ ಅಂದುಕೊಂಡು ಮುಂದೆ ಬರುವುದಕ್ಕೆ ಪ್ರಯತ್ನ ಮಾಡುತ್ತಾ ಇದೆ. ಈಗ ಇದು ನಮಗೆ ಬಹಳ ದೊಡ್ಡ ಸಮಸ್ಯೆ ಯಾಗಿ ಬಂದು ನಮ್ಮನ್ನು ಬಹಳ ಸಂಕಟಕ್ಕೆ ಈಡು ಮಾಡಿದೆ. ಆದುದರಿಂದ ಈ ಮಲೇರಿಯಾ

(ಶ್ರೀ ಎಚ್. ಸಿದ್ದವೀರಪ್ಪ)

ರೋಗ ನಿವಾರಣೆಗೆ ಎಲ್ಲಾ ಸರ್ಕಾರಗಳೂ ಇದಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ನಾವು ಕೂಡ ಇದನ್ನು ತಡೆಗಟ್ಟುವುದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲಿ 4 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಹಣವನ್ನು ಇಟ್ಟಿದ್ದೇವೆ. ಅದರ ಜೊತೆಗೆ ಈ ಮಲೇರಿಯಾವನ್ನು ಕಂಟ್ರೋಲ್ ಮಾಡಬೇಕು. ಈ ಮಲೇರಿಯಾ ರೋಗ ಬಂದರೆ ನಮ್ಮ ಜನರನ್ನು ನಿಶ್ಯಕ್ತರನ್ನಾಗಿ ಮಾಡಿಬಿಡುತ್ತದೆ. ಅವರು ಯಾವ ಕೆಲಸಕ್ಕೂ ಮುಂದೆ ಬಂದು ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ತಮಗೆ ಮೊದಲೇ ಹೇಳಿದ ಹಾಗೆ ಈ ಔಷಧಿಗಳನ್ನು ಕೊಂಡುಕೊಳ್ಳುವ ವಿಚಾರದಲ್ಲಿ ಹೇಳಿದ್ದೇನೆ. ಆ ಬಗ್ಗೆ ಅವರುಗಳ ಲೆಕ್ಕಾಚಾರವನ್ನು ತರಿಸಿ ನೋಡಿದ್ದೇನೆ. ಕೆಲವು ತಾಲ್ಲೂಕು ಆಸ್ಪತ್ರೆಗಳಲ್ಲಿ ಇಡೀ ವರ್ಷದಲ್ಲಿ 3 ಕಾಸಿನಷ್ಟೂ ಔಷಧಿ ಹೋಗಿರಲಿಲ್ಲ. ಈರೀತಿ ಬಹಳ ಅನ್ಯಾಯ ನಡೆಯುತ್ತಾ ಇತ್ತು. ಈಗ ಇದಕ್ಕಾಗಿ 3 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಆದುದರಿಂದ ಈ ಬಗ್ಗೆ ಒಂದು ಸ್ಟ್ರೀಮ್‌ಲೈನ್ ಮಾಡಿ ಪ್ರತಿಯೊಂದು ಆಸ್ಪತ್ರೆಗೂ ಒಂದು ನಿಗದಿಯಾದ ಔಷಧಿಗಳು ಹೋಗಬೇಕು ಎನ್ನುವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಒಟ್ಟು ಕೊಂಡುಕೊಳ್ಳತಕ್ಕ ಔಷಧಿಗಳಲ್ಲಿ ⅓ ಪಾಲಾದರೂ ಕೂಡ 1200 ರೂರಲ್ ಆಸ್ಪತ್ರೆಗಳಿಗೆ ಹೋಗಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈರೀತಿ ಒಂದು ಸ್ಟ್ರೀಮ್ ಲೈನ್ ಮಾಡಿ ಒಂದೇ ಪ್ಯಾಟ್ರನ್ ಇರಬೇಕು ಅಂತ ಮಾಡಿದ್ದೇವೆ. ಕನಿಷ್ಟಪಕ್ಷ ಒಂದು ರೂರಲ್ ಡಿಸ್ಪೆನ್ಸರಿಗೆ 10 ಸಾವಿರ ರೂಪಾಯಿಗಳಷ್ಟು ಔಷಧಿಯನ್ನು ಕೊಡಬೇಕು ಎಂದು ಮಾಡಿದ್ದೇವೆ. ಅದನ್ನು ಅವರು ಸರಿಯಾಗಿ ಉಪಯೋಗಿಸುತ್ತಾರೆಯೋ ಇಲ್ಲವೇ ಎನ್ನುವುದನ್ನು ನಾವು ವಾಚ್ ಮಾಡುತ್ತೇವೆ. ನೀವು ಬಡ್ಜೆಟ್ ಸ್ಯಾಂಕ್ಷನ್ ಮಾಡಿ ಹೊರಟುಹೋಗಬಹುದು. ಆಮೇಲೆ ಇದರಮೇಲೆ ಅಷ್ಟು ಕಂಟ್ರೋಲ್ ಇರುವುದಿಲ್ಲ. ನಾವು ಈ ಬಗ್ಗೆ ಹೆಚ್ಚು ವಿಚಾರ ಮಾಡಬೇಕಾಗುತ್ತದೆ. ನಾವು ಈ ಬಗ್ಗೆ ಪ್ರತಿ ತಿಂಗಳೂ ಆ ಔಷಧಿಗಳು ಸರಿಯಾಗಿ ತಲುಪುತ್ತದೆಯೋ ಎನ್ನುವುದನ್ನು ವಾಚ್ ಮಾಡಬೇಕಾಗುತ್ತದೆ. ಎಲ್ಲೆಲ್ಲಿ ಮೆಡಿಸನ್ ಹೋಗಿಲ್ಲ, ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಎಲ್ಲಿ ಔಷಧಿಗಳು ತಲುಪಬೇಕೋ ಅಲ್ಲಿಗೆ ಅದು ಹೋಗದೆ ಬೇರೆ ಕಡೆ ಹೋಗುವ ಸಂದರ್ಭಗಳು ಏನಾದರೂ ಇದ್ದರೆ ಅದನ್ನು ಕೂಡ ನಾವು ವಾಚ್ ಮಾಡಬೇಕಾಗುತ್ತದೆ. ಈ ಬಗ್ಗೆ ನಾವು ಒಂದು ಬಲವಾದ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದು ತಿಳಿಸಲು ಅಪೇಕ್ಷೆಪಡುತ್ತೇನೆ.

ಇದರ ಜೊತೆಗೆ ಹಾಸ್ಪಿಟಲ್ ಫಾರ್ಮಸಿನಲ್ಲಿ ಹೊಸದಾದ ಸ್ಕೀಂ ಹಾಕಿದ್ದೇವೆ. ನಮ್ಮಲ್ಲಿ ಎಷ್ಟೋ ಜನ ತಜ್ಞರಿದ್ದಾರೆ. ಅವರಿಗೆ ಕೆಲಸ ಕೊಡುವುದಲ್ಲದೆ, ಕ್ವಾಲಿಟಿ ಕಂಟ್ರೋಲ್ ಕೂಡ ನಮಗೆ ಬರುತ್ತದೆ. ಅದರ ಪ್ರಕಾರ ಹಾಸ್ಪಿಟಲ್ ಫಾರ್ಮಸೀಜ್‌ನಲ್ಲಿ ಕೆಲವೊಂದು ದಿನಚರಿಯ ಔಷಧಿಗಳನ್ನು ನಾವು ತಯಾರು ಮಾಡುತ್ತಿದ್ದೇವೆ. ಪ್ರತಿಯೊಂದು ಮೆಡಿಕಲ್ ಕಾಲೇಜಿಗೂ ಒಂದು ಫಾರ್ಮಸಿ ಅಟ್ಯಾಚ್ ಮಾಡಿದ್ದೇವೆ. ಈಗಾಗಲೇ ಕೆಲವನ್ನು ಮಾಡುತ್ತಿದ್ದೇವೆ. ನನಗೆ ಬಂದಿರತಕ್ಕ ರಿಪೋರ್ಟ್ ಪ್ರಕಾರ ಸುಮಾರು ಒಂದು ವರ್ಷಕ್ಕೆ ಇದರಿಂದ 50 ಲಕ್ಷ ರೂಪಾಯಿಗೆ ಕಡಿಮೆ ಇಲ್ಲದೆ ಉಳಿತಾಯವಾಗುತ್ತದೆ. ಅದರ ಜೊತೆಗೆ ಒಳ್ಳೆಯ ಕ್ವಾಲಿಟಿ ಔಷಧಿ ಸಹ ಸಿಕ್ಕುತ್ತದೆ ಎನ್ನುವುದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು.

ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ನಾಯ್ಡು ಅವರು ಕುಟುಂಬ ಯೋಜನೆಯ ವಿಚಾರವಾಗಿ ಹೇಳಿದರು. ಫ್ಯಾಮಿಲಿ ಪ್ಲಾನಿಂಗ್ ನಮ್ಮ ರಾಷ್ಟ್ರದ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಅದರ ವಿಚಾರದಲ್ಲಿ ನಾವು ಈಗ ಬೇರೆ ಯಾವ ದೃಷ್ಟಿಯಿಂದಲೂ ನೋಡುವುದಕ್ಕಾಗುವುದಿಲ್ಲ. ಇದರ ಅವಶ್ಯಕತೆಯನ್ನು ಕಂಡು ಫ್ಯಾಮಿಲಿ ಪ್ಲಾನಿಂಗ್ ಕೆಲಸಕ್ಕೆ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ವರ್ಷಕ್ಕೆ ಸುಮಾರು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇದರ ಜೊತೆಗೆ ವರ್ಲ್ಡ್ ಬ್ಯಾಂಕ್‌ನವರು ಹಾಕಿರತಕ್ಕ ಸ್ಕೀಂ ಆಗಸ್ಟ್ ತಿಂಗಳಿನಿಂದ ನಮ್ಮಲ್ಲಿ ಜಾರಿಯಲ್ಲಿದೆ. ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಯಾವ ಯಾವದೋ ದೃಷ್ಟಿಯನ್ನು ತಂದು ಕೆಲವು ಸ್ನೇಹಿತರು ಒಂದು ಜನಾಂಗದ ಜನಸಂಖ್ಯೆ ಜಾಸ್ತಿಯಾಗುತ್ತದೆ ಎನ್ನತಕ್ಕ ವಾದವನ್ನು ನಮ್ಮ ಮುಂದೆ ಇಟ್ಟರು, ನನ್ನ ಹತ್ತಿರ ಇರುವ ಲೆಕ್ಕದಲ್ಲಿ ಆ ರೀತಿಯ ಟೀಕೆಗೆ ಅವಕಾಶವಿಲ್ಲ ಎಂದು ನನಗಾದರೂ ಅನ್ನಿಸುತ್ತದೆ.

Sri C. M. ARUMUGHAM.--I request the Hon. Minister to give us figures religionwise.

Sri H. SIDDAVEERAPPA.—

	Population in the State (percentage)	Vasictomy	Tubectomy (percentage)	I. U. C. D.
Hindus	... 86.8	79.7	86.8	85.25
Muslims	... 10.63	6.3	4.8	5.7
Christians	... 2.09	2.5	2.1	3.2

The rest are others. Therefore, the kind of feeling that Muslims go on begetting more and Hindus go on begetting less and therefore the Muslim population will go up and the Hindu population will be less is not warranted by facts.

ಶ್ರೀ ಎಚ್. ಟಿ. ಕೃಷ್ಣಪ್ಪ.—ತಾವು ಕೊಟ್ಟಿರುವ ಅಂಕಿ ಅಂಶಗಳಿಂದಲೇ ವ್ಯತ್ಯಾಸ ಗೊತ್ತಾಗುವುದಿಲ್ಲವೇ ?

ಶ್ರೀ ಎಚ್. ಸಿದ್ಧವೀರಪ್ಪ.—ಅವರ ಜನಸಂಖ್ಯೆಯ ಪ್ರಮಾಣವೂ ಕಡಿಮೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಪರ್ಸೆಂಟೇಜ್ ರೇಷಿಯೋ ಒಂದೇ ಆಗಬೇಕಲ್ಲವೇ ?

Sri H. SIDDAVEERAPPA.—Let not the hon. Member try to have that glass and look at it. Even if what the hon. Member says is true I challenge his figures. Even if they say that lesser number of Muslims are having recourse to family planning, the number of Hindus that are born will always overtake the number born in other communities.

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ಸೆನ್ಸಸ್ ಪ್ರಕಾರ ಯಾವ ಜನಸಂಖ್ಯೆ ಎಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ ?

Sri H. SIDDAVEERAPPA.—In the same ratio in which it was in 1961. We will organise a symposium and discuss this subject.

ಶ್ರೀ ಕೆ. ಎಚ್. ಹನುಮೇಗೌಡ.—ಹಿಂದೂಗಳಲ್ಲಿ ಒಬ್ಬರಿಗಿಂತ ಹೆಚ್ಚಾಗಿ ಮದುವೆಯಾದರೆ ಸರ್ಕಾರಿ ಕೆಲಸ ಕೊಡುವುದಿಲ್ಲ, ಅವರಿಗೆ ಇರುವ ಬೆನಿಫಿಟ್ಸ್ ತೆಗೆದುಹಾಕುತ್ತೀರಿ. ಅದೇ ಬೇರೆಯವರು ಐದು ಜನಗಳವರೆಗೂ ಮದುವೆಯಾಗಿದ್ದರೂ ಎಲ್ಲ ಸೌಕರ್ಯಗಳನ್ನು ಕೊಡುತ್ತೀರಿ. ಈ ತಾರತಮ್ಯವೇಕೆ ?

Sri H. SIDDAVEERAPPA.—All that I ean say is that we have not entered into the personal law of the minorities in this country The hon. Member does not belong to a minority community. So, why is he afraid ?

ಶ್ರೀ ಕೆ. ಎಚ್. ಹನುಮೇಗೌಡ.—ಮುಸ್ಲಿಂ ರಾಷ್ಟ್ರಗಳಲ್ಲಿ ಕೂಡ ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಕಂಡುಬಂದ ಮೇಲೆ ನಿರ್ಭಯವಾಗಿ ಜಾರಿಗೆ ತರುತ್ತಿದ್ದಾರೆ. ನಮ್ಮ ದೇಶದಲ್ಲಿರುವ ಎಲ್ಲ ಜನಾಂಗಗಳವರೂ, ನಮ್ಮ ದೇಶದಲ್ಲಿಯೇ ಹುಟ್ಟಿ ಬೆಳೆಯಬೇಕಾಗಿರುವುದರಿಂದ ಎಲ್ಲರಿಗೂ ಏಕೆ ಒಂದೇ ಪದ್ಧತಿಯನ್ನು ಅನ್ವಯ ಮಾಡಬಾರದು ?

Sri H. SIDDAVEERAPPA.—This is a matter that comes within the purview of the Parliament. As long as we are here under the Constitution, we cannot interfere with the personal law of that community.

2–00 P. M.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಜನರಲ್ಲಿ ಸಂಶಯಪಡತಕ್ಕ ಕೆಲವು ಅಂಶಗಳು ಬಂದಿವೆ. ಕುಟುಂಬ ಯೋಜನೆಯನ್ನು ಬರೀ ಹಿಂದುಗಳೇ ಅನುಸರಿಸುತ್ತಿದ್ದಾರೆ, ಮುಸಲ್ಮಾನರು ಅನುಸರಿಸುತ್ತಿಲ್ಲ ಮತ್ತು ಅವರು ಆಪರೇಷನ್‌ಗಳನ್ನೂ ಮಾಡಿಸಿಕೊಳ್ಳುವುದಿಲ್ಲ ಎನ್ನುವ ಅಭಿಪ್ರಾಯವಿದೆ.

(ಶ್ರೀ ಕಾಗೋಡು ತಿಮ್ಮಪ್ಪ)

ಇಂತಹ ಸಂಶಯಗಳು ಸರ್ವೇ ಸಾಧಾರಣವಾಗಿ ಬರುತ್ತಿವೆ, ಇಂತಹ ಕೆಲವು ಅಂಶಗಳ ಬಗ್ಗೆ ತಾವು ಇಲ್ಲಿ ದೀರ್ಘವಾಗಿ ಆಲೋಚನೆ ಮಾಡಬೇಕು ಮತ್ತು ಹಾಗೆ ಮಾಡದೇ ಹೋದರೆ ಮುಂದೆ ಈ ಸಂಶಯವೇ ದೊಡ್ಡದಾಗಿ ಬೆಳೆಯುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಸಂಶಯ ಎನ್ನುವ ಪೆಡಂಭೂತಕ್ಕೆ ಹೋಗಬೇಡಿ ಮತ್ತು ಇಂತಹ ಸಾಮ್ರಾಜ್ಯದಲ್ಲಿ ತೇಲಾಡಬೇಡಿರಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇಂದು ಮುಸ್ಲಿಮರ ಸಂಖ್ಯೆ ಜಾಸ್ತಿಯಾಗುತ್ತ ಬೆಳೆಯುತ್ತಿದೆ. ಆದರೆ ಹಿಂದುಗಳ ಸಂಖ್ಯೆ ಕಡಿಮೆಯಾಗುತ್ತ ಬರುತ್ತಿದೆ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತಿದೆ, ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಬೇಡವೇ ?

ಶ್ರೀ ಎಚ್. ಸಿದ್ದವೀರಪ್ಪ.—ಸುಮ್ಮನೆ ಯಾವ ಯಾವುದೋ ದೃಷ್ಟಿಯಿಂದ ಇದನ್ನು ನೋಡಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಹಿಂದೂ ಫ್ಯಾನಟಿಕ್ಸ್ ಒಂದು ರೀತಿ ಬೆಳೆಯುತ್ತಿದೆ. ಮುಸ್ಲಿಮರ ಸಂಖ್ಯೆಯನ್ನು ಬೆಳೆಸಲು ಅವಕಾಶ ಕೊಡುತ್ತಾರೆ ಹಿಂದುಗಳಿಗಿಲ್ಲ ಎಂದು ಇದೆ. ಅದುದರಿಂದ ಇದರಲ್ಲಿ ಮುಸ್ಲಿಮರನ್ನೂ ಇರುವಂತೆ ಏಕೆ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಬರೀ ಕಾನೂನು ಮಾಡಿ ಮಾಡುತ್ತಿಲ್ಲ. ವಾಲಂಟರಿಯಾಗಿ ಮಾಡುತ್ತಿರುವ ಯೋಜನೆ.

ಶ್ರೀ ಎಚ್. ಡಿ. ದೇವೇಗೌಡ.—ಕೋಟಿಗಟ್ಟಲೆ ಖರ್ಚು ಮಾಡುತ್ತಿದ್ದರೂ ನಿಮ್ಮ ಪ್ಲಾನು ಇದರಲ್ಲಿ ಫೇಲ್ ಆಗಿದೆ, ಇದನ್ನು ಹೇಗೆ ಸರಿಮಾಡುತ್ತೀರಿ ?

ಶ್ರೀ ಎಚ್ ಸಿದ್ದವೀರಪ್ಪ.—ಇದನ್ನು ರಾಷ್ಟ್ರೀಯ ದೃಷ್ಟಿಯಿಂದ ತಾವು ನೋಡಬೇಕು, ಜನಸಾಮಾನ್ಯರಿಗಾಗಿ ಕುಟುಂಬ ಯೋಜನೆ ಮಾಡುತ್ತಿರುವುದು. ಆದರೆ ಜನಸಂಖ್ಯೆ ಜಾಸ್ತಿಯಾಗುವಂತೆ ಉತ್ಪತ್ತಿಯೂ ದೇಶದಲ್ಲಿ ಹೆಚ್ಚಾದರೆ ಚಿಂತೆ ಇಲ್ಲ. ಆದರೆ ಉತ್ಪತ್ತಿ ಕಡಿಮೆಯಾಗಿ ಬರೀ ಜನಸಂಖ್ಯೆಯೇ ಹೆಚ್ಚುತ್ತಾ ಹೋದರೆ ಅದನ್ನು ಯಾವ ರೀತಿ ಸರಿಪಡಿಸಬೇಕು ? ಇದನ್ನು ಸರಕಾರ ಯೋಚನೆ ಮಾಡಬೇಕು.

ಶ್ರೀ ಟಿ. ಎಂ. ಮಂಜುನಾಥ್.—ರಾಷ್ಟ್ರೀಯ ಮನೋಭಾವನೆ ಬೆಳೆಸಿಕೊಳ್ಳಬೇಕೆಂದು ಮಂತ್ರಿಗಳು ಹೇಳುತ್ತಾರೆ. ನಾನು ಅವರಲ್ಲಿ ಕಳಕಳಿಯಿಂದ ಮನವಿ ಮಾಡುವುದು ಯಾವುದಾದರೂ ಯೋಜನೆ ಮಾಡುವಾಗ ಅದು ನಮ್ಮ ದೇಶದ ಎಲ್ಲ ಜನರಿಗೂ ಸಂಬಂಧಪಡುವಂತೆ ಇರಬೇಕು. ಎಲ್ಲ ಜನರಿಗೂ ಸೌಲಭ್ಯಗಳು ದೊರಕುವಂತೆ ಮಾಡಬೇಕು, ಆದರೆ ಇದರಲ್ಲಿ ಯಾವುದೇ ಜನಾಂಗಕ್ಕೆ ಇದು ಅನ್ವಯವಾಗದಂತೆ ಮಾಡುವುದು ಸರಿಯಲ್ಲ. ಇದರ ಬಗ್ಗೆ ಸರಿಯಾದ ಅಂಕಿ ಅಂಶಗಳನ್ನು ಕೊಡದೇ ಇದ್ದರೆ ಇದರಿಂದ ರಾಷ್ಟ್ರಕ್ಕೇ ಹಾನಿಯಾಗುತ್ತದೆ ಮತ್ತು ಮುಂದೆ ಜನರು ತೊಂದರೆಪಡಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.— ನಮ್ಮ ಕೈಯಲ್ಲಿ ರಾಜ್ಯ ಇರುವವರೆಗೆ ಜನ ಸುಖವಾಗಿಯೇ ಇರುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಸಿದ್ದವೀರಪ್ಪನವರು ಇರುವವರೆಗೆ ಸುಖವಾಗಿಯೇ ಇರುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದೊಂದು ನ್ಯಾಷನಲ್ ಫ್ಯಾಮಿಲಿ ಪ್ರೋಗ್ರಾಂ. ಇದರಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎನ್ನುವುದಕ್ಕೆ ಕೆಲವು ಅಂಕೆ ಅಂಶಗಳನ್ನು ಕೊಡಬಹುದು. ಹೋದ ವರ್ಷ 55,778 ಆಪರೇಷನ್‌ಗಳಾಗಿದ್ದುವು. ಆದರೆ ಇದೇ ವರ್ಷ ಒಟ್ಟು ಒಟ್ಟು ಆಪರೇಷನ್‌ಗಳಾಗಿರುವುದು 1.35 ಲಕ್ಷದಷ್ಟು ಆಪರೇಷನ್‌ಗಳಾಗಿವೆ. ಇದರಲ್ಲಿ ಎರಡು ಮೂರು ಸಾರಿ ಚೆನ್ನಾಗಿ ಪರೀಕ್ಷೆ ಮಾಡಿ ಮಾಡಿರುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—60 ರೂಪಾಯಿಗಳು ಸಿಗುತ್ತವೆ ಎಂದು ಆಪರೇಷನ್ ಮಾಡಿಸಿಕೊಂಡಿದ್ದಾರೆ. ಗುಲ್ಬರ್ಗಾ ಹಾಗೂ ಬೀದರು ಕಡೆ ನಾವೂ ನೋಡಿ ಬಂದಿದ್ದೇವೆ. ಬೀದರ್‌ನಲ್ಲಿ ಆಪರೇಷನ್ ಮಾಡಿಸಿ ಕೊಂಡವರು ಮತ್ತೆ ಭಾಲ್ಕಿಯಲ್ಲಿ ಹೋಗಿ ಆಪರೇಷನ್ ಮಾಡಿಸಿಕೊಂಡಿರುತ್ತಾರೆ. ನಾಳೆ ಆ ಭಾಗಕ್ಕೆ ಮಂತ್ರಿಗಳು ಬರುತ್ತಿರುವುದರಿಂದ ಅವರಿಗೆ ಇದನ್ನು ನಾವು ತೋರಿಸಿ ಕೊಡುತ್ತೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ರಾಯಚೂರು ಜಿಲ್ಲೆಗೆ ಅಪರೇಷನ್ ನಡೆಯುವಾಗ ಹೋಗಿ ನೋಡಿ ಬಂದಿದ್ದೇನೆ. ಎರಡು ಮೂರು ಸಾರಿ ಚೆಕ್ ಮಾಡಿ ಮಾಡುತ್ತಾರೆ. ಇದರಲ್ಲಿ ಪ್ರೊಡಕ್ಟೀವ್ ಏಜ್‌ನಲ್ಲಿ ಯಾರಿದ್ದಾರೋ ಅಂತಹವರನ್ನು ಮಾತ್ರ ಆರಿಸಿ ಆಪರೇಷನ್‌ಗಾಗಿ ಸೇರಿಸು ತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಬ್ಯಾಚಲರ್ಸ್ ಗಳೂ ವ್ಯಾಸೆಕ್ಟಮಿ ಆಪರೇಷನ್ ಮಾಡಿಕೊಂಡಿ ರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಇದರಲ್ಲಿ ಅವರಿಗೆ ಆಸಕ್ತಿ ಬಂದಿರಬಹುದು, ಬ್ಯಾಚಲರ್ಸ್‌ಗಳಿಗೆ ಮಾಡಕೂಡದು ಎನ್ನುವುದಕ್ಕೆ ಯಾವ ಕಾನೂನೂ ಇಲ್ಲ. ಇದರಂತೆ ಸನ್ಯಾಸಿಗಳೂ ಮಾಡಿಕೊಂಡಿ ರಬಹುದು.

ಶ್ರೀ ಎಸ್. ಬಂಗಾರಪ್ಪ.—ಒಂದು ಸಾರಿ ಆಪರೇಷನ್ ಮಾಡಿಕೊಂಡಿರುವವರು ಎರಡನೇ ಸಾರಿ ಆಪರೇಷನ್ ಮಾಡಲಿಕ್ಕೆ ಬರುವುದಿಲ್ಲ ಎಂದು ಸರಕಾರ ಹೇಳುತ್ತಿದೆ. ಮಾನ್ಯ ಮಂತ್ರಿಗಳ ಎದುರಿಗೇನೇ ಒಂದು ಸಾರಿ ಆಪರೇಷನ್ ಮಾಡಿಸಿಕೊಂಡ ವ್ಯಕ್ತಿಯೂ ಎರಡನೇ ಸಾರಿಯೂ ಆಪ ರೇಷನ್ ಮಾಡಿಸಿಕೊಂಡಿರುವುದನ್ನು ಖಚಿತಪಡಿಸಲು ತಮ್ಮ ಮುಂದೆ ನಿಲ್ಲಿಸಿದರೆ ಅದರ ಬಗ್ಗೆ ತಾವೇನ ಹೇಳುತ್ತೀರಿ ?

ಶ್ರೀ ಎಚ್. ಸಿದ್ಧವೀರಪ್ಪ.—ಏಕೆ ಮಾಡಿದರು ಎಂದು ಅದಕ್ಕಾಗಿ ನಾನು ಸಂತಾಪಪಡು ತ್ತೇನೆ ಆ ತರಹ ಆಗುವುದಿಲ್ಲ. ಒಂದು ಕಡೆ ಗಾಯವಾಗಿರುವುದು ಇನ್ನೂ ದೊಡ್ಡ ಗಾಯವಾಗುತ್ತೆ, ಇದನ್ನು ಸರಿಯಾಗಿ ಡಿಸ್ಟೈಫರು ಮಾಡಲಾಗುವುದಿಲ್ಲ ಎಂದು ಹೇಳುವ ವಾದ ಸರಿಯಲ್ಲ. ಒಟ್ಟಿನಲ್ಲಿ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಂನಿಂದ ನಮ್ಮ ದೇಶಕ್ಕೆ ಬಹಳ ಹೆಚ್ಚು ಅವಶ್ಯಕತೆ ಇದೆ ಎನ್ನು ವುದು ಕಂಡುಬಂದಿದೆ. ಇದಕ್ಕಾಗಿ ಕೇಂದ್ರ ಸರಕಾರದವರು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಒಂದು ವರ್ಷಕ್ಕೆ ಸುಮಾರು 150 ಕೋಟಿ ರೂಪಾಯಿಯವರೆಗೆ ಖರ್ಚು ಮಾಡುತ್ತಿದ್ದಾರೆ. ಇದರ ಆವಶ್ಯಕತೆಯನ್ನು ತಿಳಿದು ಇಂದು ವರ್ಲ್ಡ್ ಬ್ಯಾಂಕಿನವರು ಕೂಡ ಇದಕ್ಕಾಗಿ ಸುಮಾರು 12 ಕೋಟಿ ರೂಪಾಯಿಗಳ ಒಂದು ಸ್ಕೀಂನ್ನು ಮಾಡಿ ನಮ್ಮ ಮೈಸೂರು ರಾಜ್ಯಕ್ಕೆ ಹಾಗೂ ಯು. ಪಿ ರಾಜ್ಯಕ್ಕೆ ಒದಗಿಸಿಕೊಟ್ಟಿದ್ದಾರೆ. ಇದು ಕೇಂದ್ರ ಸರಕಾರದ ಮೂಲಕ ನಮಗೆ ಗ್ರಾಂಟಾಗಿ ಬರುತ್ತಿದೆ ಮತ್ತು ಸಾಕಷ್ಟು ಪ್ರಗತಿಯುತವಾಗಿ ಕೆಲಸಗಳೂ ನಡೆಯುತ್ತಿವೆ. ನಮ್ಮ ಮಟ್ಟಿಗೆ ಪುಲ್ ಗ್ರಾಂಟುಗಳೆಂದು ಕೊಟ್ಟಿದ್ದಾರೆ. ಕೇಂದ್ರ ಸರಕಾರ ದವರು ಕಡಿಮೆ ಬಡ್ಡಿಯಲ್ಲಿ ವರ್ಲ್ಡ್ ಬ್ಯಾಂಕಿನಲ್ಲಿ ತೆಗೆದುಕೊಂಡು ನಮ್ಮ ರಾಜ್ಯಕ್ಕೆ ಗ್ರಾಂಟಾಗಿ ಕೊಡುತ್ತಿದ್ದಾರೆ ಮತ್ತು ನಮ್ಮ ರಾಜ್ಯದಲ್ಲಿ ಸರಿಯಾಗಿ ಹಾಗೂ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಗಳಾಗುತ್ತಿವೆ ಎಂದು ಅವರಿಗೂ ಮನವರಿಕೆಯಾಗಿದೆ. ಅದರಂತೆ ನಾವು ಹೆಚ್ಚು ಉತ್ಸಾಹದಿಂದ ಕೆಲಸ ಮಾಡುವುದೂ ಅವಶ್ಯಕ. ಶ್ರೀ ನಾಯ್ಡುರವರು ಹೇಳಿದಂತೆ ನಮ್ಮಲ್ಲಿ ಫ್ಯಾಮಿಲಿ ಫ್ಲಾನಿಂಗ್ ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಿದೆ, ಇದರ ಬಗ್ಗೆ ಯಾರೂ ಯೋಚನೆ ಮಾಡಬೇಕಾಗಿಲ್ಲ.

ಶ್ರೀಮಾನ್ ಸವಣೂರು ರವರು ನಾರು ಹುಣ್ಣಿನ ಬಗ್ಗೆ ಹೇಳಿದರು. ಕೆಲವು ಕಡೆ ಇಂತಹ ವಿಚಿತ್ರ ಕಾಯಿಲೆಗಳಿವೆ. ಮುಂಡರಗಿ ತಾಲ್ಲೂಕಿನಲ್ಲಿ ಕೆಲವು ಕಡೆ ಇರುವ ನೀರನ್ನು ಕುಡಿದರೆ ಅಲ್ಲಿನ ಜನರ ಹಲ್ಲುಗಳೇ ಉದುರಿಹೋಗುತ್ತವೆ ಎಂದು ಹೇಳುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ವಿಚಿತ್ರ ಕಾಯಿಲೆಗಳು ಎಂದು ಹೇಳುತಾ ಹಲ್ಲುಗಳು ಉದುರುತ್ತವೆ ಎಂದು ಹೇಳಿದರು. ನಮ್ಮ ಮಂತ್ರಿಗಳು ಎಲ್ಲಾದರೂ ಹೋಗಿ ಅಲ್ಲಿ ನೀರು ಕುಡಿದರೆ ಅವರ ಹಲ್ಲುಗಳೂ ಕೂಡ ಹೋಗಬಹುದು.

ಶ್ರೀ ಎಚ್. ಸಿದ್ಧವೀರಪ್ಪ.—ನನ್ನ ಹಲ್ಲುಗಳು ಹೋದರೇನೂ ನನಗೆ ಚಿಂತೆ ಇಲ್ಲ. ಇದಕ್ಕೆ ವಿಚಾರ ಮಾಡಬೇಡಿ. ನಾರು ಹುಣ್ಣುಗಳ ಔಷಧಿಯನ್ನು ಇನ್ನೂ ಯಾರೂ ಕಂಡುಹಿಡಿದಿಲ್ಲ. ಇನ್ನು ಶ್ರೀ ಸಿದ್ದಪ್ಪನವರು ಕೆಲವು ಆಸ್ಪತ್ರೆಗಳಲ್ಲಿರುವ ವೆಹಿಕಲ್‌ಗಳಿಗೆ ಪೆಟ್ರೋಲ್ ತೆಗೆದುಕೊಂಡು ಇದರ ಬಾಕಿಯನ್ನು ನಾಲ್ಕು ವರ್ಷಗಳಾದರೂ ಕೊಟ್ಟಿಲ್ಲ ಮತ್ತು ಜನರಿಗೆ ವಾಹನಗಳ ಸೌಕ ರ್ಯವೂ ಸಿಗುತ್ತಿಲ್ಲ ಎಂದರು. ಇದು ಬಹು ಗಹನವಾದ ವಿಚಾರ, ಇದರ ಬಗ್ಗೆ ವಿಚಾರ ಮಾಡು ತ್ತೇನೆ. ಯಾವ ದೇಶದಲ್ಲಿಯೂ ಇದಕ್ಕೆ ಔಷಧವನ್ನು ಕಂಡುಹಿಡಿದಿಲ್ಲ. ಇದಕ್ಕೆ ಒಂದೇ ಒಂದು ಸಲಹೆ ಎಂದರೆ ನೀರನ್ನು ಕಾಯಿಸಿ ಕುಡಿಯುವುದು. ಏಕೆಂದರೆ ಇದು ನೀರಿನಿಂದ ಬರುವ ರೋಗ ವಾದ್ದರಿಂದ ಕಾಯಿಸಿ ಕುಡಿದರೆ ಸರಿಯೋಗುತ್ತದೆಂದು ನಾನು ಅವರಿಗೆ ತಿಳಿಸುತ್ತೇನೆ. ಶ್ರೀಮಾನ್

(ಶ್ರೀ ಎಚ್. ಸಿದ್ದವೀರಪ್ಪ)

ವೀರಭದ್ರಪ್ಪನವರು ಬಳ್ಳಾರಿ ಕಾಲೇಜನ್ನು ಅಲಕ್ಷ್ಯ ಮಾಡಲಾಗಿದೆ ಎಂದು ಹೇಳಿದರು. ಅಲಕ್ಷ್ಯವಾಗಿದ್ದು ನಿಜ. ಈ ವರ್ಷ 80 ಖಾಲಿ ಜಾಗಗಳನ್ನು ಭರ್ತಿ ಮಾಡಿ ಆ ಕಾಲೇಜನ್ನು ಒಳ್ಳೆಯ ದಾರಿಯಲ್ಲಿ ತರಬೇಕೆಂಬ ಉದ್ದೇಶ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಈಗಿನ ತೊಂದರೆಯೆಲ್ಲಾ ನಿವಾರಣೆಯಾಗುತ್ತದೆಂದು ಹೇಳುತ್ತೇನೆ. ಕೆಲವು ಮಾನ್ಯ ಸದಸ್ಯರು ಕುಷ್ಠ ರೋಗದ ವಿಚಾರ ಹೇಳಿದರು. ಇದು ಬಹಳ ಕಡೆ ಇದೆ. ಇದರ ನಿವಾರಣೆಗಾಗಿ ಯಾವ ರೀತಿ ಎಪಿಡಮಿಕ್ ಕಂಟ್ರೋಲ್ ಮಾಡಬೇಕೆಂಬ ಬಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡುತ್ತಿದೆ. ಶ್ರೀಮಾನ್ ಪುಟ್ಟಸ್ವಾಮಿಯವರು ಹಳ್ಳಿಗಳಲ್ಲಿರುವ ಆಸ್ಪತ್ರೆಗಳಲ್ಲಿಯೂ ಹಾಸಿಗೆಗಳನ್ನು ಪ್ರೊವೈಡ್ ಮಾಡಬೇಕೆಂದು ಹೇಳಿದರು. ಇದಕ್ಕೆ ಪಿ. ಎಚ್. ಸಿ. ಯಲ್ಲಿ ಪ್ರಾವಿಜನ್ ಇದೆ. ಕನಿಷ್ಠ 6 ಹಾಸಿಗೆಗಳಾದರೂ ಇರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಶ್ರೀಮಾನ್ ಮಾದೇಗೌಡರು ಸಣ್ಣ ಆಸ್ಪತ್ರೆಗಳಿಗೂ ಹತ್ತು ಸಾವಿರ ರೂಪಾಯಿಗಳ ಔಷಧವನ್ನು ಒದಗಿಸಬೇಕೆಂದು ಹೇಳಿದರು ; ಮತ್ತು ಇಷ್ಟೆಲ್ಲಾ ಹಣ ಖರ್ಚು ಮಾಡಿದರೂ ಸಹ ಡಾಕ್ಟರ್‌ಗಳಲ್ಲಿ ಸರ್ವಿಸ್ ಮೆಂಟಾಲಿಟಿ ಇಲ್ಲದಿರುವುದರಿಂದ ಜನಸಾಮಾನ್ಯರಿಗೆ ಯಾವ ಅನುಕೂಲವೂ ಆಗುತ್ತಿಲ್ಲವೆಂದು ಹೇಳಿದರು. ಡಾಕ್ಟರ್‌ಗಳಲ್ಲಿ ಈಗಿರುವ ಮನೋಭಾವ ಬದಲಾವಣೆಯಾಗಬೇಕಾಗಿದೆ ಎಂಬ ವಿಷಯವನ್ನು ಮಾನ್ಯ ಆರ್ಮುಗಂ ಅವರು ಸಹ ಹೇಳಿದರು. ನಾವು ಡಾಕ್ಟರ್‌ಗಳಿಗೆ ಸರ್ವಿಸ್ ಕಂಡೀಷನ್ಸ್ ಮತ್ತು ಸಂಬಳಸಾರಿಗೆಯ ಬಗ್ಗೆ ಎಷ್ಟೇ ಅನುಕೂಲ ಮಾಡಿಕೊಟ್ಟಿದ್ದರೂ ಸಹ ಅವರ ಒಂದು ಮನೋಭಾವ ಬದಲಾವಣೆಯಾಗದಿರುವುದಕ್ಕಾಗಿ ನನಗೆ ವ್ಯಥೆಯಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳುವುದೆಲ್ಲಾ ಸುಳ್ಳು ಎಂದು ಆ ಕಡೆಗೆ ತಳ್ಳಿಹಾಕುವುದಕ್ಕೆ ನಾನು ತಯಾರಿಲ್ಲ. ತಮ್ಮ ಮನೋಭಾವವನ್ನು ಬದಲಾವಣೆ ಮಾಡಿಕೊಳ್ಳಿ ಎಂದು ಅವರಿಗೆ ನಾನು ಒಂದು ವರ್ಷದ ಕಾಲಾವಕಾಶ ಕೊಟ್ಟಿದ್ದೆ. ಅವರೆ ಇಲ್ಲಿಯವರೆಗೆ ಎಷ್ಟರ ಮಟ್ಟಿಗೆ ಸರಿಹೋಗಬೇಕಾಗಿತ್ತೋ ಅಷ್ಟರವರೆಗೆ ಸರಿಹೋಗಿಲ್ಲ. ಅವರ ಮನೋಭಾವ ಬದಲಾವಣೆಯಾಗಿಲ್ಲ ಎಂಬುದನ್ನು ನಾನು ಮನಗಂಡಿದ್ದೇನೆ. ಸರ್ವಿಸ್ ಕಂಡೀಷನ್ಸ್‌ನಲ್ಲಿ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಎಂದು ಅವರಿಗೆ ಹೇಳಿದ್ದೆ ; ಮತ್ತು ಅಧಿಕಾರಗಳನ್ನು ವಿಕೇಂದ್ರೀಕರಣ ಮಾಡಿ ಫೈನಾನ್ಸಿಯಲ್ ಪವರ್ ಕೊಟ್ಟು ಚೆನ್ನಾಗಿ ಕೆಲಸ ಮಾಡಿ ಎಂದು ಹೇಳಿದರೂ ಕೂಡ ಅವರು ತಮ್ಮ ಮನೋಭಾವವನ್ನು ಬದಲಾವಣೆ ಮಾಡಿಕೊಂಡಿಲ್ಲ. ಇನ್ನು ಮುಂದಾದರೂ ಅವರು ಬದಲಾವಣೆಯಾಗದಿದ್ದರೆ ಕಾಯ ಚಿಕಿತ್ಸೆ ಮಾಡುವುದಕ್ಕೆ ಸರ್ಕಾರ ತಯಾರಾಗಬೇಕಾಗುತ್ತದೆ. ಈಗ ಇವರಿಗೆ ಯಾವುದರಲ್ಲಿಯೂ ಕಡಿಮೆಯಾಗದಂತೆ ನೋಡಿಕೊಳ್ಳಲಾಗಿದೆ. ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವವರಿದ್ದಾರೆ, ಅದಕ್ಕಿಂತ ಕಡಿಮೆ ತೆಗೆದುಕೊಳ್ಳುವವರು ಸಹ ಇದ್ದಾರೆ. ಈ ಕಾರಣದಿಂದ ಜನತಾ ಸೇವೆಯನ್ನು ಮಾಡುವುದರಲ್ಲಿ ಡಾಕ್ಟರ್‌ಗಳು ಮುಂದೆ ಬರುವುದು ಒಳ್ಳೆಯದು. ಈ ಒಂದು ಪರ್ಸೆಂಟೇಜ್ ಜಾಸ್ತಿಯಾಗಬೇಕಾಗಿದೆ. ಇಂದಿಗೂ ಕೂಡ ಕೆಲವು ಡಾಕ್ಟರ್‌ಗಳನ್ನು ದೇವರು ಎಂಬ ದೃಷ್ಟಿಯಿಂದ ಜನರು ನೋಡುತ್ತಾರೆ. ಇದಕ್ಕೆ ಕಾರಣ ಅವರು ಒಳ್ಳೆಯ ಕೆಲಸಗಳನ್ನು ಮಾಡುವುದು. ಇಂತಹ ಡಾಕ್ಟರ್‌ಗಳನ್ನು ಆ ಊರಿನ ಜನರು ಬಿಟ್ಟುಕೊಡುವುದಕ್ಕೂ ಸಹ ತಯಾರಿರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅಂತಹವರನ್ನೇ ವರ್ಗ ಮಾಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಬೇರೆ ಜನರಿಗೂ ಅವರ ಸೇವೆ ದೊರಕಲಿ ಎಂದು ವರ್ಗ ಮಾಡುತ್ತೇವೆ. ಈ ಸಭೆಯ ಮೂಲಕ ವೈದ್ಯಕೀಯ ಇಲಾಖೆಯಲ್ಲಿರುವವರಿಗೆ ನನ್ನ ಕಳಕಳಿಯ ಮನವಿಯಾದರೂ ಇಷ್ಟು ; ಜನತೆ ಇಂದು ಹುಷಾರಾಗಿದ್ದಾರೆ. ಅವರು ಕಣ್ಮುಚ್ಚಿ ಕುಳಿತಿಲ್ಲ. ಯಾರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದನ್ನು ನೋಡುವ ದೃಷ್ಟಿ ಅವರಲ್ಲಿ ಬಂದಿದೆ. ಆದ್ದರಿಂದ ಡಾಕ್ಟರ್‌ಗಳು ಅವರ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಹೋಗುವುದು ಒಳ್ಳೆಯದು. ಇವೊತ್ತಿನ ದಿವಸ ಯಾರು ಈ ಕೆಲಸದಲ್ಲಿ ನಿರತರಾಗಿದ್ದಾರೆ, ಅವರಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದರೆ ಕಾನೂನು ದೃಷ್ಟಿಯಿಂದ ಬೇರೆ ಕಡೆಗೆ ವರ್ಗ ಮಾಡುವುದು ಮತ್ತು ಬರಿ ಸಸ್ಪೆಂಡ್ ಮಾಡುವುದರಿಂದಲೇ ಈ ಸಮಸ್ಯೆ ಬಗೆಹರಿಯುತ್ತದೆಂದು ನಾನು ತಿಳಿದುಕೊಂಡಿಲ್ಲ. ಈ ಸಮಸ್ಯೆಯನ್ನು ಹೇಗೆ ಬಿಡಿಸಬೇಕೆಂಬುದನ್ನು ನಾವು ನೋಡುತ್ತಿದ್ದೇವೆ. ಇವರುಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿದೆಯೇ ಎಂಬ ಬಗ್ಗೆ ನೋಡಿಕೊಳ್ಳಲು ಸ್ಥಳೀಯ ಪ್ರತಿನಿಧಿಗಳಿಂದ ಒಳಗೊಂಡಂತಹ ಒಂದು ಕಮಿಟಿಯನ್ನು ಮಾಡಬೇಕೆಂದಿದ್ದೇವೆ. ಅಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳು ಸರಿಯಾಗಿದೆಯೇ ಎಂಬುದನ್ನು ಕಮಿಟಿಯವರು ನೋಡಿಕೊಳ್ಳಲು ಮತ್ತು ಸರಿಯಾಗಿ ಕೆಲಸ ಕಾರ್ಯವಾಗಲು ಸಲಹೆ ಮಾಡಲು ಇದರಿಂದ ಅನುಕೂಲವಾಗುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಸ್ಥಳೀಯ ಪ್ರತಿನಿಧಿಗಳನ್ನು ಒಳಗೊಂಡಂತಹ ಕಮಿಟಿಯನ್ನು ಮಾಡಬೇಕೆಂದಿದ್ದೇವೆಂದು ತಾವು ಹೇಳಿದಿರಿ. ಈಗ ಆಸ್ಪತ್ರೆಗಳಲ್ಲಿ ಔಷಧ ತೆಗೆದುಕೊಳ್ಳಲು ಬಡ ಜನರು ಕ್ಯೂನಲ್ಲಿ ನಿಂತಿರುತ್ತಾರೆ. ನಮ್ಮಂತಹವರು ಅಲ್ಲಿಗೆ ಹೋದಾಗ ಮೊದಲು ಕರೆದು ಟ್ರೀಟ್‌ಮೆಂಟ್ ಕೊಡುವುದನ್ನು ನಾನು ನೋಡಿದ್ದೇನೆ. ಇಂತಹ ಪ್ರತಿನಿಧಿಗಳನ್ನು ಒಳಗೊಂಡಂತಹ ಕಮಿಟಿಯನ್ನು ತಾವು ಮಾಡಿದಾಗ ಅವರೂ ಸಹ ಔಷಧ ತಗೆದುಕೊಳ್ಳಲು ಕ್ಯೂನಲ್ಲಿ ನಿಲ್ಲಬೇಕಾಗುತ್ತವೆ. ಜನತಾ ಪ್ರತಿನಿಧಿಗಳನ್ನು ಕ್ಯೂನಲ್ಲಿ ನಿಲ್ಲಿಸಿದರೆ ಅವರು ದೂರು ಕೊಡಬಹುದು. ಅಂತಹ ಸಂದರ್ಭದಲ್ಲಿ ಡಾಕ್ಟರ್ ಅವರ ಎಫಿಷಿಯನ್ಸಿ ಬಗ್ಗೆ ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ದೇವೇಗೌಡರು ಎಲ್ಲಿಯವರೆಗೆ ಜನತಾ ಪ್ರತಿನಿಧಿಗಳಾಗಿರುತ್ತಾರೋ ಅಲ್ಲಿಯವರೆಗೆ ಅವರು ಸಾಮಾನ್ಯ ಜನರ ಹಿತರಕ್ಷಣೆ ಮಾಡುತ್ತಾರೆಂದು ನಾನು ತಿಳಿದಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇಂದು ದೊಡ್ಡ ದೊಡ್ಡ ಶ್ರೀಮಂತರ ಮಕ್ಕಳು, ಮಂತ್ರಿಗಳ ಮಕ್ಕಳು ಮತ್ತು ಅಳಿಯಂದಿರುಗಳು ಡಾಕ್ಟರ್‌ಗಳಾಗಿರುವುದರಿಂದ ಅವರ ಮನೋಭಾವ ಸಾಮಾನ್ಯ ಜನರ ಕಡೆಗೆ ಹರಿಯುತ್ತಿಲ್ಲ. ಈ ಕಾರಣದಿಂದ ಮೆಡಿಕಲ್ ಕಾಲೇಜುಗಳಲ್ಲಿ ಜನಸಾಮಾನ್ಯರ ಮಕ್ಕಳಿಗೇ ಸೀಟ್‌ಗಳನ್ನು ಕೊಟ್ಟರೆ ಅವರು ಮುಂದೆ ಹಳ್ಳಿಗಾಡಿನ ಜನರನ್ನು ಅಭಿಮಾನದಿಂದ ಕಾಣುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ಸಿದ್ದಪ್ಪನವರು ರಾಜ್ಯಾಂಗದಲ್ಲಿ ಆ ಬಗ್ಗೆ ಅವಕಾಶ ಮಾಡಿಕೊಟ್ಟಾಗ ಅದನ್ನು ಯೋಚನೆ ಮಾಡೋಣ. ಸಧ್ಯಕ್ಕೆ ಮಂತ್ರಿಗಳ ಮಕ್ಕಳೂ ಸಹ ಈ ದೇಶದ ಪ್ರಜೆಗಳೇ ಆಗಿದ್ದಾರೆ. ಟ್ಯಾಲೆಂಟ್ ಇರುವವರಿಗೆ ಸೀಟ್ ಕೊಡುವುದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ.

ಶ್ರೀಮಾನ್ ಮಾದೇಗೌಡರು ಇನ್ನೊಂದು ವಿಷಯ ಹೇಳಿದರು. ದಳ್ಳಾಳಿಗಳಿಂದ ಅನ್ಯಾಯವಾಗುತ್ತಿದೆ ಎಂದು. ನಿಮ್ಮಿಂದ ಅನ್ಯಾಯವಾಗದಿದ್ದರೂ ನಿಮ್ಮ ಹೆಸರು ಹೇಳಿಕೊಂಡ ದಳ್ಳಾಳಿಗಳಿಂದ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಅವರು ಹೇಳಿದ್ದು ನನಗೆ ಪೂರ್ತಿಯಾಗಿ ಅರ್ಥವಾಗಲಿಲ್ಲ. ಕೆಲವರು ಮಂತ್ರಿಗಳ ಹೆಸರನ್ನು ದುರುಪಯೋಗ ಮಾಡಿಕೊಳ್ಳಬಹುದು. ಇಂದು ಜನರು ಎಲ್ಲಿಯವರೆಗೆ ಹೋಗಿದ್ದಾರೆಂದರೆ, ನಾನೇ ಮಂತ್ರಿ ಮಾತನಾಡುತ್ತಿರುವುದು ಎಂದು ಹೇಳಿಕೊಳ್ಳುವುದರವರೆಗೆ ಹೋಗಿದ್ದಾರೆ. ಇದು ನನಗೆ ಆಶ್ಚರ್ಯವಾಗಿ ಕಾಣುತ್ತದೆ. ನಮ್ಮ ಜನರ ಮಾರಲ್ ಸ್ಟ್ಯಾಂಡರ್ಡ್ ಎಲ್ಲಿಯವರೆಗೆ ಹೋಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸರಿಯಾದ ಗಮನ ಕೊಡಬಾರದೆಂದು ನಾನು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಜನರ ಸಂಪರ್ಕ ಬಿಟ್ಟುಬಿಡಬೇಕೆಂದರೆ ನಾನು ಸುಲಭವಾಗಿ ಬಿಟ್ಟುಬಿಡುತ್ತೇನೆ. ಪ್ರತಿಯೊಂದು ಕೇಸ್‌ನಲ್ಲಿಯೂ ಜಾಯಿಂಟ್ ಡೈರೆಕ್ಟರ್, ಕಮೀಷನರ್ ಮತ್ತು ಸೆಕ್ರೆಟರಿ ಎಂದು ರೆಫರ್ ಮಾಡಿ ಸುಮ್ಮನೆ ಕುಳಿತುಕೊಳ್ಳುವುದು ಸುಲಭ. ಆದರೆ ಜನತಾ ಪ್ರತಿನಿಧಿಗಳಾಗಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ನನ್ನನ್ನು ನೋಡುವುದಕ್ಕೆ ಜನರು ಬಂದಾಗ ನೋಡುವುದಿಲ್ಲ ಎಂದು ಹೇಳುವುದು ಸರಿಯೇ? ಆದರೆ ಇಷ್ಟು ಮಾತ್ರ ನಿಜ, ನಾನು ಯಾರನ್ನೂ ದಳ್ಳಾಳಿಗಳನ್ನಾಗಿ ನೇಮಕ ಮಾಡಿಕೊಂಡಿಲ್ಲ. ಆದರೆ ನನ್ನ ಹೆಸರನ್ನು ಹೇಳಿಕೊಂಡು ಯಾರಾದರೂ ಬಂದರೆ ಅದನ್ನು ಯಾವ ರೀತಿ ತಡೆಗಟ್ಟುವುದಕ್ಕೆ ಸಾಧ್ಯ? ನಾನು ಕೋಣೆಯಲ್ಲಿ ಕೂತು ಅಧಿಕಾರ ಮಾಡುವ ಹಾಗಿಲ್ಲ, ಜನಬರುತ್ತಾರೆ, ಸ್ವಾಮಿ ಊರಿನಲ್ಲಿ ಈ ರೀತಿಯಾಗಿದೆ ಎಂದು ಹೇಳುತ್ತಾರೆ. ನೀವು ಏತಕ್ಕೆ ಬಂದಿದ್ದೀರಿ ಎಂದು ನಾನು ಕೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದು ಸತ್ಯವಾದ ಮಾತು; ನಾನು ಮಂತ್ರಿ ಮಾತನಾಡುತ್ತಿರುವುದು ಎಂದು ಮಂತ್ರಿಗಳ ಮನೆಯವರು ಫೋನ್ ಮಾಡುತ್ತಾರೆ. ಉದಾಹರಣೆಗೆ ಅಮ್ಮಾವ್ರು ಫೋನ್ ಮಾಡುತ್ತಾರೆ, ಅಳಿಯ ಫೋನ್ ಮಾಡುತ್ತಾರೆ, ಇದಕ್ಕೆ ಅವರು ಏನು ಹೇಳುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಹೇಳುವುದನ್ನು ನಾನು ನಂಬುವುದಿಲ್ಲ. ಜನ ಸಾಮಾನ್ಯರಿಗೆ ನೈತಿಕ ಮಟ್ಟ ಕೆಳಕ್ಕೆ ಹೋದಾಗ ಅದನ್ನು ಮೇಲಕ್ಕೆ ಎತ್ತತಕ್ಕ ಜವಾಬ್ದಾರಿ ಸಾರ್ವಜನಿಕ ಪ್ರತಿನಿಧಿಗಳೂದ ನಮ್ಮ ಮೇಲೆ ಇದೆ. ಅದನ್ನು ನಾವು ಮಾಡಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—

ಇನ್ನು ಶ್ರೀಮಾನ್ ಟಿ. ಆರ್. ಶಾಮಣ್ಣನವರು ನೇಚರ್ ಕ್ಯೂರ್ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ನನ್ನ ವಿಚಾರದಲ್ಲಿ ವೈಯ್ಯಕ್ತಿಕ ಅಭಿಪ್ರಾಯಗಳನ್ನು ಹೇಳಿದ್ದಾರೆ. ಆದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ.

ಶ್ರೀಮಾನ್ ಹಲಗೇಗೌಡರು ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ ಬಹಳ ಆಸಕ್ತಿ ವಹಿಸಿ ಮಾತನಾಡಿದ್ದಾರೆ. ಅವರಿಗೆ ಅಪರೇಷನ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಹಾಸನದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಸೆಂಟರನ್ನು ಪ್ರಾರಂಭ ಮಾಡುತ್ತೇವೆ. ಶ್ರೀಮಾನ್ ಕೆ. ಎಂ. ರುದ್ರಪ್ಪನವರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಶ್ರೀಮಾನ್ ಆರ್ಮುಗಂ ಅವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ವಿದ್ಯಾಭ್ಯಾಸದ ವಿಚಾರವಾಗಿ ಹೇಳಿದ್ದಾರೆ. Behavioural changes in doctors. ಇದರ ವಿಚಾರದಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನತಕ್ಕಂಥಾದ್ದನ್ನು ದೀರ್ಘವಾಗಿ ನಾನು ಯೋಚನೆ ಮಾಡುತ್ತೇನೆ, ಇದು ಒಂದು ದಿವಸದಲ್ಲಿ ಬಗೆಹರಿಯುವುದಿಲ್ಲ. ಶ್ರೀಮಾನ್ ಹನುಮೇಗೌಡರು ಬೌರಿಂಗ್ ಆಸ್ಪತ್ರೆಯಲ್ಲಿ ಶ್ರೀಮಾನ್ ರಾಮಚಂದ್ರಪ್ಪ ಎನ್ನುವ ಒಬ್ಬರು ಪೇಷೆಂಟ್ ವರ್ಷಾನುಗಟ್ಟಲೆಯಿಂದ ಇದ್ದಾರೆ ಎಂದು ಹೇಳಿದ್ದರು, ಶ್ರೀಮಾನ್ ರಾಮಚಂದ್ರಪ್ಪನವರನ್ನು ನಾನು ನೋಡಿದ್ದೇನೆ, ಅವರಿಗೆ ಹೆಂಡತಿ ಮಕ್ಕಳು ಇದ್ದಾರೆ. ಅವರು ಬೌರಿಂಗ್ ಆಸ್ಪತ್ರೆಯಲ್ಲಿರುವುದನ್ನು ನಾನು ಒಂದೆರೆಡು ಬಾರಿ ಅಲ್ಲಿಗೆ ಹೋದಾಗ ನೋಡಿದ್ದೆ. ಅವರು ಆ ಆಸ್ಪತ್ರೆಯಲ್ಲಿ ಪುಗಸಟ್ಟೆ ಇಲ್ಲ. ದುಡ್ಡು ಕೊಟ್ಟು ವಾರ್ಡಿನಲ್ಲಿ ಇದ್ದಾರೆ. ಅವರಿಗೆ ಮಧುಮೇಹ ಖಾಯಿಲೆ ಇದೆ. He has got heart attack, he has got diabetics, he has got various complaints. ಅವರು ಕೆಲವು ಕಾಲ ಅಲ್ಲಿದ್ದು ಹೋಗುತ್ತಾರೆ. ಅವರು ಇನ್ನು 15 ದಿವಸ ಆ ಆಸ್ಪತ್ರೆಯಲ್ಲಿ ಇರಬೇಕಾದ ಅವಶ್ಯಕತೆ ಇದೆ ಎಂದು ರಿಪೋರ್ಟ್ ಬಂದಿದೆ. ಅವರು ಯಾರನ್ನು ದುರುಪಯೋಗ ಮಾಡಿಕೊಳ್ಳತಕ್ಕ ಮನುಷ್ಯರಲ್ಲ. ಬೌರಿಂಗ್ ಆಸ್ಪತ್ರೆಯಿಂದ ನನಗೆ ಅವರ ಬಗ್ಗೆ ಒಂದು ಪತ್ರ ಬಂದಿದೆ. ಅದನ್ನು ಓದುತ್ತೇನೆ. ಅದು ಈ ರೀತಿ ಇದೆ : —

Doctor in the hospital says ;" I found Sri Ramachandrappa to be very courteous and respectful. He had established good patient-doctor relations, because he is there from July. He was obedient to nursed and considerate to other para-medical staff. He has not misused the name of the Hon. ble Minister for Health for any favour nor I found him to be disrespectful to the staff." ಎಂದು ಬರೆದಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ ತಾಲ್ಲೂಕು ಹೆಡ್‌ಕ್ವಾರ್ಟ್ರುಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಟೆಲಿಫೋನ್‌ಗಳು ಇಲ್ಲದೇ ಇರುವುದು ಬಹಳ ತೊಂದರೆಯಾಗಿದೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟ್ರುಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಟೆಲಿಫೋನ್ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri H. SIDDAVEERAPPA.—It is a very useful suggestion, and I shall consider and get it examined whethe a telephone can be installed in very taluk hospital. My colleague the Hon'ble Finance Minister is saying that wherever telephone facility is available, let us have telephones in hospitals. Therefore I will pass orders.

ಈಗ ನಾನು ಕೆಲವು ಅಂಕಿ ಅಂಶಗಳನ್ನು ತಮಗೆ ತಿಳಿಸುತ್ತೇನೆ. ಈಗ ನಮ್ಮ ಸ್ಟೇಟಿನಲ್ಲಿ 760 ಜನ ಮೆಡಿಕಲ್ ಗ್ರಾಜುಯೇಟ್ಸ್ ನಿರುದ್ಯೋಗಿಗಳು ಇದ್ದಾರೆ. ಪೋಸ್ಟ್ ಗ್ರಾಜುಯೇಟ್ಸ್ 3 ಜನ ಇದ್ದಾರೆ. ಫಾರ್ಮಸಿ ಗ್ರಾಜುಯೇಟ್ಸ್ 44 ಜನ ಇದ್ದಾರೆ. ಆಯುರ್ವೇದ ಗ್ರಾಜುಯೇಟ್ಸ್ 89 ಜನ ಇದ್ದಾರೆ. ಡೆಂಟಲ್ ಗ್ರಾಜುಯೇಟ್ಸ್ 35 ಜನ ಇದ್ದಾರೆ.

As far as possible, it will be my responsiblity and I shall strive to see that all these people are employed and the first place will be given to the Scheduled Castes and Scheduled Tribes. Upto this day,

their percentage has not gone above 5.5 percent. Therefore I have said that all backward class candidates whoever they are, they will all be employed. ಉದಾಹರಣೆಗೆ ಹೇಳುವುದಾದರೆ ಪ್ರತಿ ದಿವಸ ಮೂರು ನಾಲ್ಕು ಜನರನ್ನು ನೇಮಕ ಮಾಡುತ್ತಿದ್ದೇವೆ. ಮೊನ್ನೆ ಒಬ್ಬ ಡೊಂಬರ ಜಾತಿಯ ಹುಡುಗ ಬಂದಿದ್ದ. When the name of a candidate from the Domber community came to my notice, I immediately gave him a temporary job inspite of denying you all. ಅದೇ ರೀತಿ ಪ್ಯಾರಾ ಮೆಡಿಕಲ್ ಸ್ಟಾಫ್ ಬಗ್ಗೆ ಸಹ ಹೇಳುವುದಾದರೆ, ಅಲ್ಲಿ ಬಹಳ ಪೋಸ್ಟುಗಳು ಇವೆ.

2-30 P.M.

I want to tell my hon. friend Sri Armugam that even in para medical staff, we have got 600 to 700 vacancies have not been able to fill up these posts. On account of the complaints received in this House, I have abolished the committee. Now I am getting it reconstituted. In the Selection Committee, a member from the Scheduled Caste must invariably be there. I have found one man being in 10 sub committees. My point is : it should not be reserved only for the people who have retired from service. I have been seriously thinking why not those that are in service should not be considered for being put as a representative of Scheduled Caste as a non-official member. Therefore for that purpose I have held back that file. I have placed the matter before the Cabinet and I hope the Cabinet will take a suitable decision in the matter. Our difficulty is : we have 55 committees in the Department. I have found one man on half a dozen committees. I think I will have to do justice. I have received several complaints I do not want to enter into the merits or the demerits of the complaints, about the filling up of vacanies. Wherever these vacancies are to be filled, they will be filled up as early as possible. In filling up the vacancies we have followed a uniform pattern. In my department there are 55 committes. There is real need for making permanent appointments. I have not been able to do that. I am sorry I have taken much more time than was necessay.

Sri H. S. SIDDAPPA.—I had pointed out the scarcity of dental equipments. You have appointed Dentists without proper equipments.

Sri H. SIDDAVEERAPPA.—What can I do if the chairs are not available ? The manufacturerers are not supplying the chairs. If you have got any company in view which can manufacture and supply chairs, I am going to make a purchase. Now as it is, I have placed orders wherever they are manufactured. As soon as I receive them, I shall supply to the hospitals.

Sri H. S. SIDDAPPA.—I had requested for reservation of seats in the Medical Colleges for the sons of ex-military personnel. May I know what you are going to do in this matter ?

Sri H. SIDDAVEERAPPA.—As far as I remember, 2 percent of the seats are reserved for ex-servicemen.

Sri H. S. SIDDAPPA.—In view of their serviees to the country, the percentage should b3 increased.

Sri H. SIDDAVEERAPPA.–I agree with the view of the hon. member that ex-servicemen should be treated on a different footing altogether because they have rendered great service to the nation.

Madam Speaker, looking retospectiveiy, I think during this one year, I have no reason to feel that this department has not functioned properly ; of course, no doubt, it might not have come to the expectation of the hon. members of this House, but I am quite confident, wherever I have gone to the villages –I had no time to go to many districts except two districts, we have spread some feeling in the minds of the people that those who work there, must render better service to the State than what they were doing. I know it is a very difficult job. In fact, it is much easier to climb the Mount Everest rather than trying to improve it within a short period. We have been doing it and we have been trying to streamline it and we have tried to see that at each level certain improvement is made in the efficiency of the Department. But unfortunately if it has not come to our level, it is because we have been brought up in a different groove and that accounts for the reason. And I am sure, the younger people that are coming forward to serve the profession I think everybody will agree with me that doctor's profession is the noblest profession, he will have to enter nto the hospital as if he is entering into a temple. Of course, nowadays even in the temple, the sanctity is lost, but that is a different matter. Now what I am saying is that if the doctors do not serve the common man with the zeal with which they are expected to do, then I will have to regret for their performance.

With these few words, I thank once again for the opportunity given to me to speak. I am sorry I could not refer to all the points which the hon. members had raised ; but however, they will be looked into.

ಶ್ರೀ ಕೆ. ಎಚ್. ಹನುಮೇಗೌಡ.—ನನ್ನ ಭಾಷಣದಲ್ಲಿ ಜಿಲ್ಲಾ ಕೇಂದ್ರಗಳಲ್ಲಿರತಕ್ಕಂತಹ ಜನರಲ್ ಆಸ್ಪತ್ರೆಗಳಲ್ಲಿ ಔಟ್‌ಪೇಷಂಟ್ ವಾರ್ಡುಗಳನ್ನು ತೆಗೆಯುವುದಕ್ಕೆ ಸಲಹೆಯನ್ನು ಕೊಟ್ಟಿದ್ದೆ. ಅದರ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲೆಲ್ಲಿ ಔಟ್ ಪೇಶಂಟ್‌ಗಳ ಅಗತ್ಯ ಇದೆ, ಅಲ್ಲಿ ಕೊಡುತ್ತೇವೆ. ಉದಾಹರಣೆಗೆ ಮಂಡ್ಯದ ಆಸ್ಪತ್ರೆಯಲ್ಲಿ ಮತ್ತು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇದರ ಬಗ್ಗೆ ಸಾಕಷ್ಟು ಹಣ ಖರ್ಚು ಮಾಡಿದ್ದೇವೆ. We have taken a lot of building works in the Public Works Department. Your suggestion will be examined.

ಶ್ರೀ ಪಿ. ಎಂ. ಬಂಗಿ.—ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಆರ್ಟ್ಸ್ ಮತ್ತು ಸಯನ್ಸ್ ಕಾಲೇಜು ವಿದ್ಯಾರ್ಥಿಗಳಿಗೆ ಫೀಜ್ ವಿನಾಯಿತಿ ಕೊಡಲಾಗಿದೆ. ಆದರೆ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಕೊಟ್ಟಿಲ್ಲ. ಆದ್ದರಿಂದ ಅವರಿಗೂ ವಿನಾಯಿತಿ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡುತ್ತೇನೆ. ಒಂದೇ ಸಾರಿ ಅದನ್ನು ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಎರಡು ಸಾರಿ ಆ ವಿಚಾರ ಕ್ಯಾಬಿನೆಟ್ಟಿನಲ್ಲಿ ಬಂದಿದೆ. ಏತಕ್ಕೋಸ್ಕರ ಬಾಕಿ ಕಾಲೇಜುಗಳಲ್ಲಿ ಕೊಟ್ಟ ಅನುಕೂಲ ಇವರಿಗೆ ಕೊಟ್ಟಿಲ್ಲ ಎಂಬುದು ಗೊತ್ತಿಲ್ಲ. ಆದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ತಾಲ್ಲೂಕು ಲೆವೆಲ್ ಆಸ್ಪತ್ರೆಗಳಲ್ಲಿ ಫೋನ್ ಅವಶ್ಯಕತೆ ಹೇಗೆ ಇದೆ ಯೆಂದು ಹೇಳಿದ್ದೀರೋ ಅದೇ ರೀತಿ ಆಸ್ಪತ್ರೆಗಳಲ್ಲಿ ಕಿಚನ್ ಸೌಕರ್ಯ ಇಲ್ಲ. ಇದರಿಂದ ಅಲ್ಲಿ ಆಹಾರವನ್ನು ಮಾಡಿ ಕೊಡುವುದಕ್ಕೆ ಬಹಳ ಕಷ್ಟ. ಆದ್ದರಿಂದ ತಾಲ್ಲೂಕು ಕಂಬೈನ್ಡ್ ಆಸ್ಪತ್ರೆ ಗಳಲ್ಲಿ ಕಿಚನ್ ಸೌಲಭ್ಯವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಚಿಕ್ಕಬಳ್ಳಾಪುರಕ್ಕೆ ಹೋದಾಗ ಅಲ್ಲಿ ರೆಸ್ತೆಯಲ್ಲಿ ಅಡಿಗೆ ಮಾಡುತ್ತಿದ್ದರು. ನಾನು ಕೂಡಲೇ ಕಿಚನ್ ಒದಗಿಸುವುದಕ್ಕೆ ಆರ್ಡರ್ ಮಾಡಿದ್ದೇನೆ. ಅದೇ ರೀತಿ ಎಲ್ಲೆಲ್ಲಿ ಇದರ ಅವಶ್ಯಕತೆ ಇದೆಯೋ ಅಲ್ಲಿ ಇದನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲದೆ ಇದರಿಂದ ಅಷ್ಟೇನೂ ಖರ್ಚು ಆಗುವುದಿಲ್ಲ. ಅದನ್ನು ಮಾಡಿಸೋಣ.

ಶ್ರೀ ಕೊಣಂದೂರು ಲಿಂಗಪ್ಪ.—ಬೆಂಗಳೂರಿನಲ್ಲಿರತಕ್ಕ ಎಸ್. ಡಿ. ಎಸ್. ಸ್ಯಾನಿಟೋರಿಯಂ, ಟಿ. ಬಿ. ವಾರ್ಡ್ ಬಹಳ ಕಾಲದಿಂದ ಇದೆ. ಅದನ್ನು ಬಹಳ ಹಿಂದೆ ಕೊಟ್ಟಿದ್ದು. ಈ ರಾಜ್ಯದಲ್ಲಿ ಅದು ಒಂದೇ ವಾರ್ಡ್ ಇದೆ. ಅಲ್ಲಿ ಡಾ. ಮ್ಯಾಸ್ಕರ್ನಸ್ ಎಂದು ಇದ್ದಾರೆ. ಆ ವಾರ್ಡನ್ನು ಹೆಚ್ಚು ಬಡಾವಣೆ ಮಾಡುವುದಕ್ಕೆ ಒಂದು ಯೋಜನೆಯನ್ನು ಹಾಕುತ್ತೀರಾ ? ಸ್ಪೆಷಲಿಸ್ಟ್ಸ್ ಅಲ್ಲಿ ಇದ್ದಾರೆ. ಅಲ್ಲಿ ಡಾಕ್ಟರ್ ಕೂಡುವ ಕೊಠಡಿ ನೋಡಿದರೆ ಗೊತ್ತಾಗುತ್ತದೆ. ಅದನ್ನು ಕೂಡಲೇ ಬಡಾವಣೆ ಮಾಡಿ ಬೇಕಾದಂಥ ಎಕ್ವಿಪ್‌ಮೆಂಟ್‌ಗಳನ್ನು ಅಲ್ಲಿಗೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಬೇರೆ ಇನ್ನೊಂದು ಬಿಲ್ಡಿಂಗ್ ಬಡಾವಣೆ ಮಾಡಬೇಕಾದ ಅವಶ್ಯ ಕತೆ ಇದೆ. ಅಲ್ಲಿ ಟ್ಯೂಬರ್‌ಕ್ಯುಲಾಸಿಸ್ ಪೇಷಂಟ್ಸ್‌ಗಳ ಒತ್ತಡ ಬಹಳ ಇದೆ. ಅಲ್ಲಿ ಮಾಡುವ ಸೇವೆಗೆ ಸರಿಯಾದ ಜಾಗ ಸಾಲುತ್ತಿಲ್ಲ. ಅಲ್ಲಿ ಒಂದು ಔಟ್‌ಪೇಷೆಂಟ್ ವಾರ್ಡ್ ಅವಶ್ಯಕವಿದೆ. ಅಲ್ಲಿ ಇರುವ ಯಂತೆ ಜನರು ನಿಂತಿರುತ್ತಾರೆ. ಅಲ್ಲಿಯಾಗಲೀ, ವರಾಂಡದಲ್ಲಾಗಲೀ ಕಾಲು ಇಡು ವುದಕ್ಕಾಗುವುದಿಲ್ಲ. ರೋಗಿಯನ್ನು ಕರೆದುಕೊಂಡು ಹೋಗುವವರಿಗೇ ಕಾಯಿಲೆ ಬರುವಷ್ಟು ಒತ್ತಡ ಇದೆ. ಆದ್ದರಿಂದ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರದಲ್ಲಿ ಒಂದು ಬ್ಲೈಂಡ್ ರಿಲೀಫ್ ಅಸೋಸಿಯೇಷನ್ ಎಂಬುದಾಗಿ ಇದೆ. ಅದಕ್ಕೆ ಕೊಡತಕ್ಕ ಗ್ರಾಂಟ್ ಇಲ್ಲಿಯವರೆಗೂ ಕೇವಲ ಕಡಿಮೆ ಪರ್ಸಂಟೇಜಿ ನಲ್ಲಿದೆ. ಈಗ ಅಲ್ಲಿರತಕ್ಕ ಫಂಡ್ ಬಹಳ ಕಡಿಮೆಯಾಗುತ್ತಾ ಇದೆ. ಆದ್ದರಿಂದ ಪೂರ್ತಿ ಗ್ರಾಂಟನ್ನು ಸರ್ಕಾರದಿಂದ ಕೊಡಬೇಕೆಂದು ಅಲ್ಲಿರತಕ್ಕ ಮ್ಯಾನೇಜ್‌ಮೆಂಟ್ ಕಮಿಟಿಯವರು ಒಂದು ನಿರ್ಣಯ ವನ್ನು ಪಾಸ್ ಮಾಡಿ ಕಳುಹಿಸಿದ್ದರೂ ಸರ್ಕಾರದವರು ಇನ್ನೂ ಇದುವರೆಗೆ ಕೊಟ್ಟಿಲ್ಲ. ಅದನ್ನು ಈಗಲಾದರೂ ಜಾಗ್ರತೆಯಾಗಿ ಕೊಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಅಲ್ಲಿಗೆ ಬಂದಾಗ ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ನೋಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಯಂಕಪ್ಪ.—ಮಲೆನಾಡಿನ ಬಗ್ಗೆ ನಾನು ಹಲವು ವಿಷಯಗಳನ್ನು ಹೇಳಿದ್ದೆ ತಾವು ಏನೂ ಹೇಳಲಿಲ್ಲ. ಅದನ್ನು ಸ್ವಲ್ಪ ತಿಳಿಸಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಸದಸ್ಯರು ಹೇಳಿದ್ದನ್ನು ನೆನಪಿನಲ್ಲಿಟ್ಟು ನೀವು ಏನೇನು ಸಲಹೆಗಳನ್ನು ಹೇಳಿದ್ದೀರೋ ಅದನ್ನು ವಿಚಾರಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಖಾಸಗಿ ವೈದ್ಯಕೀಯ ಶಾಲೆಗೆ ಸಂಬಂಧಪಟ್ಟುದನ್ನು ಸರ್ಕಾರ ವಹಿಸಿಕೊಳ್ಳುವ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಸೇಕಡ 75 ಭಾಗದ ಸೀಟುಗಳನ್ನು 5 ಸಾವಿರ ರೂಪಾಯಿಗಳನ್ನು ಕೊಡುವವರಿಗೆ ಕೊಡುತ್ತೇವೆಂದು ಹೇಳಿದರು. ಸೀಟಿನ ಬಗ್ಗೆ 5 ಸಾವಿರ ರೂಪಾಯಿಗಳನ್ನು ಅವರು ಕೊಡುವ ಬಗ್ಗೆ ಯಾವ ಭರವಸೆಯನ್ನು ಸರ್ಕಾರದವರು ಅವರ ಮೇಲೆ ಕೊಡುತ್ತಾರೆ ?

ಶ್ರೀ ಎಚ್. ಸಿದ್ಧವೀರಪ್ಪ.—ಅವರು ಆ ರೀತಿ ಮಾಡದಿದ್ದರೆ ಅವರಿಗೆ ಕೊಡುತ್ತಿರುವ ಅಫಿಲಿ ಯೇಷನ್ನನ್ನು ತೆಗೆಯುತ್ತೇವೆಂಬುದಕ್ಕೆ ಸರ್ಕಾರದ ಜೊತೆಗೆ ಒಂದು ಅಗ್ರಿಮೆಂಟಿಗೆ ಬಂದಿದ್ದಾರೆ, ಆದ್ದರಿಂದ. 5 ಸಾವಿರ ರೂಪಾಯಿಗಳನ್ನು ಕೊಟ್ಟವರಿಗೆ ಸೀಟು ಕೊಡುತ್ತೇವೆ ಎಂಬು ದಾಗಿ ಹೇಳುವುದಕ್ಕಾಗುವುದಿಲ್ಲ. ಈಗ ಸೀಟುಗಳು ಎಷ್ಟಿವೆಯೆಂಬುದನ್ನೂ ಸಹ ನೋಡ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮಲ್ಲಿ ಪ್ರೈಯಾರಿಟಿ ಲಿಸ್ಟ್ ಇಲ್ಲವೇ? ಅದು ಗೌರ್ನಿಂಗ್ ಬಾಡಿಯಾಗಿ ಇರುತ್ತದೆ. ಆದ್ದರಿಂದ 5 ಸಾವಿರ ರೂಪಾಯಿಗಳವರೆಗೆ ಕೊಟ್ಟಿರುವವರಿಗೆ ಸೀಟು ಗಳನ್ನು ಕೊಡುತ್ತೀರಾ?

Sri H. SIDDAVEERAPPA.—25 per eent will always go to the standard laid down by the Government. 5 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಕೊಟ್ಟಿದ್ದಾರೆಂದು ರುಜುವಾತು ಆದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.- ಅರ್ಜಿ ಹಾಕಿ 5 ಸಾವಿರ ರೂಪಾಯಿಗಳನ್ನು ಕೊಡುವಾಗ ಲೆಕ್ಕದಲ್ಲಿ 5 ಸಾವಿರ ರೂಪಾಯಿಗಳನ್ನು ತೋರಿಸಿ ಹಿಂದುಗಡೆ 25-30 ಸಾವಿರ ರೂಪಾಯಿಗಳನ್ನು ಕೊಡುವವರಿಗೆ ಯಾವುದಾದರೂ ಒಂದು ಪ್ರೈಯಾರಿಟಿ ಲಿಸ್ಟನ್ನು ತೆಗೆದು ಇಡುತ್ತೀರಾ? ಅಥವಾ ಆ ಲಿಸ್ಟ್ ಪ್ರಕಾರ ಮಾಡುವುದಕ್ಕಾಗುತ್ತದೆಯೇ?

Sri H. SIDDAVEERAPPA.—I have not been able to follow.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತಿವರ್ಷ ಆರೋಗ್ಯ ಇಲಾಖೆಯ ಬಗ್ಗೆ ಕೆಲವಾರು ದೂರು ಗಳನ್ನು ಕೊಟ್ಟರೂ ಅಲ್ಲಿ ಯಾವ ಸೌಕರ್ಯವೂ ಸಿಗುತ್ತಾ ಇಲ್ಲ. ಅದರ ಬಗ್ಗೆ ಮಂತ್ರಿಗಳು ಏನೂ ಹೇಳಲಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಕೆಲವು ಕಡೆಗಳಲ್ಲಿ ಸರಿಯಾಗಿ ಕೆಲಸಮಾಡಲಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ, ಎಲ್ಲಾ ಕಡೆಗಳಲ್ಲಿಯೂ ಪೂರಾ ಸ್ಟ್ಯಾಂಡರ್ಡೈಜ್ ವರ್ಕ್ ಆಗಿಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ. ಆರೋಗ್ಯ ಇಲಾಖೆಯ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಯಾವ ಕರ್ತವ್ಯವನ್ನು ಮಾಡಬೇಕೋ ಅವನ್ನು ಮಾಡಿಯೇ ತೀರಬೇಕೆಂದು ನಾನು ನನ್ನ ಇಲಾಖೆಗೆ ತಿಳಿಸು ತ್ತೇನೆ. ಆದರೆ ಅಲ್ಲಿ ಏನಾದರೂ ಲೋಪದೋಷ ಇದ್ದರೆ, ಅವು ಬೆಳೆಯುವುದಕ್ಕೆ ಬಂದರೆ ಅವನ್ನು ಸರಿಪಡಿಸಲು ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಆರೋಗ್ಯ ಸಚಿವರು ನೆರೆ ರಾಜ್ಯಗಳಲ್ಲಿ ಹೋಗಿ ಅಲ್ಲಿರುವ ಕೆಲವು ಆಸ್ಪತ್ರೆಗಳನ್ನು ನೋಡಿಕೊಂಡು ಬಂದರೆ ಬಹಳ ಒಳ್ಳೆಯದು.

Sri C. M. ARUMUGHAM.—Why not we sent a Committee of legislators?

Sri H. SIDDAVEERAPPA.—Why not you send me outside the country?

ಶ್ರೀ ಎಚ್. ಡಿ. ದೇವೇಗೌಡ.—ನೀವು ಹೋಗುವುದಾದರೆ, ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ನಿಮ್ಮ ಆಸ್ಪತ್ರೆಗಳಲ್ಲಿ ಅವಶ್ಯಕವಾಗಿ ಬೇಕಾದಂಥ ಬೆಡ್, ಫ್ಯಾನ್‌ಗಳು ಇರುವುದೇ ಇಲ್ಲ. ಸಾಮಾನ್ಯವಾಗಿ ಒಂದು ಕುಡಿಯುವ ನೀರಿನ ಲೋಟ ಕೂಡ ಇರುವುದಿಲ್ಲ. ಇವೆಲ್ಲವೂ ಪೇಷಂಟ್ಸ್‌ಗೆ ಇರಬೇಕಾದ ಮಿನಿಮಂ ರಿಕ್ವೈರ್‌ಮೆಂಟ್ಸ್. ಅಲ್ಲಿರತಕ್ಕ ಕುಕ್ಸ್ ಸರಿಯಾಗಿ ತೊಳೆಯುವುದೇ ಇಲ್ಲ. ಮದ್ರಾಸ್‌ನಲ್ಲಿರತಕ್ಕ ಡಿಸ್ಟ್ರಿಕ್ಟ್ ಆಸ್ಪತ್ರೆಗಳನ್ನು ನೋಡಿಕೊಂಡು ಬನ್ನಿ. ನಮ್ಮ ರಾಜ್ಯದಲ್ಲಿ ಅ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಸರ್ಕಾರ ಏನಾದರೂ ತ್ವರಿತವಾದ ಕ್ರಮಗಳನ್ನು ತೆಗೆದು ಕೊಳ್ಳುತ್ತಾರೆಯೇ ಎಂದು ನಾನು ಕೇಳಬೇಕಾಗುತ್ತದೆ. ಎರಡನೆಯದಾಗಿ ಹೌಸ್ ಸರ್ಜನ್ ಗಳಿಗೆ ಕೆಲವರಿಗೆ ಮಾತ್ರ ಸ್ಟೈಪಂಡ್ ಕೊಡುತ್ತಿದ್ದಾರೆ. ಇದರಲ್ಲಿ ತಾರತಮ್ಯ ಬೇಡ. ಎಲ್ಲರಿಗೂ ಸ್ಟೈಫಂಡ್ ಕೊಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಇದರಲ್ಲಿ ತಾರತಮ್ಯ ಇರುವುದಕ್ಕೆ ಕಾರಣ ಬಹಳವಾಗಿ ಬಡ ಜನರು ಬರುತ್ತಾರೆ. ಮೆಡಿಕಲ್ ಸರ್ಜರಿಗೆ ಬರುತ್ತಾರೆ. ಬಾಕಿದ್ದಕ್ಕೆ ಬರುವುದಿಲ್ಲ. ಅದಕ್ಕಾಗಿ ಇನ್‌ಸೆಂಟೀವ್ ಕೊಡುತ್ತಿದ್ದಾರೆಂದು ಹೇಳಿದರು. ಅದರೂ ಕೂಡ ಈಗ ಇದರಲ್ಲಿ ಇರತಕ್ಕ ತಾರ ತಮ್ಯವನ್ನು ತಪ್ಪಿಸಿ ಎಲ್ಲಾ ಕಡೆಗಳಲ್ಲಿಯೂ ಎಲ್ಲರಿಗೂ ಯಾವ ರೀತಿ ಕಾನೂನು ಪ್ರಕಾರ ಸ್ಟೈಫಂಡ್ ಕೊಡಬೇಕೋ ಅದನ್ನು ಕೊಡುತ್ತೇವೆ. I have received a number of representations and also complaints. I will take a decision that there should be no discrimination, and it will be done in the case of all. ಆಸ್ಪತ್ರೆಗಳಲ್ಲಿ ಬೆಡ್‌ಷೀಟ್ಸ್ ಮತ್ತು ಫ್ಯಾನ್ಸ್ ಕೊಡುವ ಬಗ್ಗೆ ಅಲ್ಲಿ ಯಾವ ಅಧಿಕಾರಿ ಇರು ತ್ತಾರೋ ಅವರು ತನ್ನ ಎಫಿಷಿಯನ್ಸಿ ಅಥವಾ ಕೈಪಾಸಿಟಿ ತೋರಿಸಬೇಕಾದರೆ ಹೆಚ್ಚಿನ ಗಮನ ಕೊಡಬೇಕಾಗಿದೆಯೆಂದು ನಾನು ಸೂಚನೆ ಕೊಡುತ್ತೇನೆ. ಆದರೆ ಆ ರೀತಿ ಅವನ್ನು ಸರಬರಾಜು

ಮಾಡದೇ ಇರುವುದಕ್ಕೆ ಕೆಲವು ಕಾರಣಗಳೂ ಸಹ ಇವೆ. ಅಲ್ಲಿ ರೋಗಿಗಳೇ ಆಗಲೀ ಅಥವಾ ಅವರ ಕಡೆಯವರು ಯಾರೇ ಆಗಲೀ ಬಾಯಿ ಬಿಟ್ಟು ಇವೆಲ್ಲವನ್ನೂ ಹೇಳುವುದಿಲ್ಲ, ಕೇಳುವುದೂ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಇಂತಹ ವಿಷಯಗಳನ್ನು ನನಗೆ ತಿಳಿಸಿದರೆ, ಅವನ್ನು ಬಗೆ ಹರಿಸಿಕೊಡಿ ಎಂದರೆ, ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದನ್ನು ಎಲ್ಲರೂ ಕಲಿಯಬೇಕಾಗಿದೆ. ಈ ದೇಶದಲ್ಲಿ ಅಧಿಕಾರ ನಡೆಸುವುದು ಬಹಳ ಕಷ್ಟ. ಏಕೆಂದರೆ ಈಗ ಟ್ರೇಡ್ ಯೂನಿಯನಿಜಂ ಬಂದಿದೆ. ಅದನ್ನು ಅನುಸರಿಸಿ ಕೆಲಸಮಾಡಬೇಕೆಂದು ನಾನು ಅಧಿಕಾರಿಗಳಿಗೆ ಹೇಳುತ್ತೇನೆ. 4ನೇ ವರ್ಗದ ನೌಕರರಿಗೂ ಸಹ ನಾನು ಅಪೀಲು ಮಾಡಿಕೊಂಡಿದ್ದೇನೆ. ಅದಷ್ಟು ಜಾಗ್ರತೆಯಾಗಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅಧಿಕಾರಿಗಳಿಗೆ ತಿಳಿಸುತ್ತೇನೆ.

MADAM SPEAKER.—I will put the demand to the vote of the House the question is :

"That a sum not exceeding Rs. 26,48,61,000 inclusive of the snm granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 18 "Medical, Public Health and Family Planning."

The motion was adopted—Demand was voted

News paper items on the Defectors in the Ruling Party

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಈಗ ಬೇರೆ ಬೇಡಿಕೆಯನ್ನು ಈ ಸಭೆಯ ಮುಂದೆ ಇಡುವುದಕ್ಕೆ ಮುಂಚಿತವಾಗಿ ಈ ಸಭೆಯ ಗಮನಕ್ಕೆ ಹಾಗೂ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. 43 ಜನ ಶಾಸಕರು ಮಂತ್ರಿಮಂಡಲದ ಬದಲಾವಣೆಗೆ ಸಹಿ ಹಾಕಿದ್ದಾರೆ. ಇವತ್ತು ಆ ವಿಷಯ ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಆ ಬದಲಾವಣೆಯನ್ನು ಯಾರು ಮಾಡಬೇಕು, ಯಾವತ್ತು ಮಾಡಬೇಕೆಂಬ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ವಿಚಾರ ವಿನಿಮಯ ನಡೆಯುತ್ತಾ ಇದೆ, ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಏಕೆಂದರೆ ನಾಳೆ ಯಾವ ಮಂತ್ರಿಗಳು ಉಳಿಯುತ್ತಾರೋ ಯಾರು ಉಳಿಯುವುದಿಲ್ಲವೋ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ತಾವು ಕೇಳುತ್ತಿರುವ ವಿಷಯವನ್ನು ಈಗ ನಮ್ಮ ಮುಂದಿರತಕ್ಕ ಕಾರ್ಯಕ್ರಮ ಗಳೆಲ್ಲಾ ಮುಗಿದ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್.—ಏಕೆಂದರೆ ಅಲ್ಲಿ 43 ಜನ ಶಾಸಕರು ಸಹಿ ಹಾಕಿರತಕ್ಕ ವಿಚಾರ ದಲ್ಲಿ ಲಾಬಿಯಿಂಗ್ ನಡೆಯುತ್ತಿದೆ. ಆ 43 ಜನರು ಕ್ಯಾಬಿನೆಟ್ ಬದಲಾವಣೆಯಾಗಬೇಕೆಂದು ಅಲ್ಲಿ ಬಹಳ ಒತ್ತಾಯ ಮಾಡುತ್ತಿದ್ದಾರೆ...

ಶ್ರೀ ಎಚ್. ಎಸ್. ಸಿದ್ದಪ್ಪ.—ಆ ವಿಷಯ ಕೇಳಿ ಕೆಲವು ಮಂತ್ರಿಗಳಿಗೆ ಹೃದ್ರೋಗ ಪ್ರಾರಂಭ ವಾಗಿದೆ ಎಂಬ ಸುದ್ದಿ ಕೇಳುತ್ತಿದ್ದೇವೆ.

ಅಧ್ಯಕ್ಷರು.—ತಮ್ಮನ್ನು ಅಲ್ಲಿ ಅವರಿಗೆ ಉಪಚರಿಸುವುದಕ್ಕೆ ಬರಬೇಕೆಂದು ಕರೆದಿದ್ದಾರೇನೋ ?

Sri C. M. ARUMUGHAM.—I have got a point to bring to your kind notice.

MADAM SPEAKER.—Mr. Armugham, we have just three hours ; we have to finish this. I do not think there is any urgent matter to raise now.